ಸಂಪುಟ: 06 ಸಂಚಿಕೆ: 137 ಪುಟಗಳು: 08 ಗುರುವಾರ 30 ಜುಲೈ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

ಮುಂಜಾನೆ ಮಾತು

ಯಶಸ್ಸಿನ ಆಧಾರದ ಮೇಲೆ ವ್ಯಕ್ತಿಯ ಅಳತೆ ಸಲ್ಲ. ಬಿದ್ದಾಗಲೆಲ್ಲ ಮತ್ತೆ ಎದ್ದು ನಿಂತು ಸಾಗಿದ್ದು ಮಹತ್ವದ್ದು ಎಂಬುದನ್ನು ಗಮನಿಸೋಣ!

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ನಮಗೇ ಕುಡಿಯೋಕೆ ನೀರಿಲ್ಲ, ಅವರಿಗೆ ಕೊಡಿ ಅಂದ್ರೆ ಹೇಗೆ? ಪರಮೇಶ್ವರ್ ಕಿಡಿ

• ಉದಯವಾಹಿನಿ, ಬೆಂಗಳೂರು

ನಮಗೇ ಕುಡಿಯೋಕೆ ನೀರಿಲ್ಲ, ಹಾಗಿದ್ದಾಗ 3,500 ಸಾವಿರ ಕ್ಯೂಸೆಕ್ ನೀರು ಕೊಡಿ ಅಂದ್ರೆ ಹೇಗೆ? ಎಂದು ಡಿಸಿಎಂ ಪರಮೇಶ್ವರ್ ಕಿಡಿಕಾರಿದ್ದಾರೆ. ಮಾಧ್ಯಮದವರೊಂದಿಗೆ ಕಾವೇರಿ ನೀರು ತಮಿಳುನಾಡಿಗೆ ಹರಿಸುವ ವಿಚಾರವಾಗಿ ಮಾತನಾಡಿದ ಅವರು, ನಮಗೇ ಕುಡಿಯಲು ನೀರಿಲ್ಲ. ಹಾಗಿದ್ದಾಗ 3,500 ಸಾವಿರ ಕ್ಯೂಸೆಕ್ ನೀರು ಕೊಡಿ ಅಂದ್ರೆ ಹೇಗೆ? ಇದರ ಬಗ್ಗೆ ಚರ್ಚೆಗೆ ಸಿಎಂ ಸರ್ವಪಕ್ಷದ ಸಭೆ ಕರೆಯುತ್ತಾರೆ. ಸೋಮವಾರ (ಆ.3) ತಮಿಳುನಾಡು ಸಿಎಂ ವಿಜಯ್ ಜೋಸೆಫ್ ಬರ್ತಾರೆ, ಅವರ ಜೊತೆಗೂ ಸಿಎಂ ಚರ್ಚೆ ಮಾಡಬಹುದು. ಇವತ್ತು ರಾಮಲಿಂಗಾರೆಡ್ಡಿ ಸಭೆ ಕರೆದಿದ್ದಾರೆ, ಮುಂದೇನು ಮಾಡಬೇಕು ಅಂತ ಚರ್ಚಿಸ್ತಾರೆ. ಈ ಸಂಬಂಧ ಸಹಜವಾಗಿ ರೈತರು ಪ್ರತಿಭಟನೆ ಮಾಡ್ತಾರೆ, ನಿನ್ನೆಯಿಂದ ಹೋರಾಟ ಮಾಡ್ತಿದ್ದಾರೆ. ಸರ್ಕಾರ ಅಂತಿಮವಾಗಿ ಏನು ತೀರ್ಮಾನ ತೆಗೆದುಕೊಳ್ಳುತ್ತದೆ ನೋಡೋಣ ಎಂದಿದ್ದಾರೆ. ಮೇಕೆದಾಟು ವಿಚಾರವಾಗಿ ಮಾತನಾಡಿ, ಮೇಕೆದಾಟು ಯೋಜನೆಗೆ ಆಕ್ಷೇಪ ಮಾಡುವಂತಿಲ್ಲ ಅಂತ ಸಂಸತ್ ಹೇಳಿದೆ. ಕೋರ್ಟ್ ಏನು ತೀರ್ಮಾನ ಮಾಡುತ್ತದೆ ಅದೇ ಅಂತಿಮ. ಕೋರ್ಟ್ ಈಗಾಗಲೇ ಹೇಳಿದೆ, ಹೀಗಾಗಿ ಆದರಂತೆ ನಡೆಯಬೇಕು. ಜೋಸೆಫ್ ವಿಜಯ್ ಪಿಎಂಗೆ ಪತ್ರ ಬರೆದಿದ್ದಾರೆ, ಬರೆಯಲಿ. ಆದ್ರೆ ಕೋರ್ಟ್ ಏನು ಹೇಳಿದೆಯೋ ಅದೇ ಅಂತಿಮ ಎಂದಿದ್ದಾರೆ.

ಸಿಎಂ ವಿಜಯ್-ಡಿಕೆಶಿ ಭೇಟಿಗೆ ಬಿಜೆಪಿ ಟೀಕೆ ವಿಚಾರವಾಗಿ ಮಾತನಾಡಿ, ಒಕ್ಕೂಟ ವ್ಯವಸ್ಥೆಯಲ್ಲಿ ಇದೆಲ್ಲ ಸಹಜ. ಎರಡೂ ರಾಜ್ಯಗಳ ಸಿಎಂ ಒಂದಷ್ಟು ವಿಚಾರದ ಬಗ್ಗೆ ಚರ್ಚೆ ಮಾಡ್ತಾರೆ. ಟಿಬಿ ಡ್ಯಾಮ್ ಕ್ರಸ್ಟ್ ಗೇಟ್ ಉದ್ಘಾಟನೆಗೆ ಮೂರು ರಾಜ್ಯಗಳ ಸಿಎಂಗಳು ಬಂದಿದ್ರು.

ನಾವು ಆಕ್ಕಪಕ್ಕದ ರಾಜ್ಯಗಳು ಏನು ಜಗಳ ಆಡ್ಕೋಬೇಕಾ? ಯಾರೂ ಹೊಂದಾಣಿಕೆಯಲ್ಲಿ ಹೋಗಬಾರದಾ? ರಾಜ್ಯಗಳು ಜಗಳ ಆಡ್ಕೋಬೇಕು ಅನ್ನೋದು ಬಿಜೆಪಿ ನೀತಿ ಇರಬೇಕು, ಅದಕ್ಕೆ ಹಾಗೆ ಮಾತಾಡ್ತಾರೆ ಎಂದು ವ್ಯಂಗ್ಯವಾಡಿದ್ದಾರೆ.

ಬೆಂಗಳೂರಿನ ಮೀನು ಪ್ರಿಯರಿಗೆ ಆಘಾತ: ಪೂರೈಕೆಯಲ್ಲಿ ಶೇ.70ರಷ್ಟು ಇಳಿಕೆ, ಬೆಲೆ ಏರಿಕೆ!

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಕಳೆದ ಒಂದು ತಿಂಗಳಿಂದ ಮೀನು ಪ್ರಿಯರಿಗೆ ಭಾರೀ ನಿರಾಶೆ ಎದುರಾಗಿದೆ. ಮೀನು ಮಾರುಕಟ್ಟೆಗಳಿಗೆ ಪೂರೈಕೆಯಲ್ಲಿ ಶೇ.70ರಷ್ಟು ಇಳಿಕೆ ಕಂಡಿದ್ದು, ಗ್ರಾಹಕರು ಹಾಗೂ ಮಾರಾಟಗಾರರು ಹತಾಶೆಯಲ್ಲಿದ್ದಾರೆ. ಮೀನುಗಳ ಸಂತಾನೋತ್ಪತ್ತಿ ಕಾರಣ, ಕರಾವಳಿಯಲ್ಲಿ ಮೀನುಗಾರಿಕೆಯನ್ನ ನಿಷೇಧಿಸಲಾಗಿದೆ. ಹೀಗಾಗಿ ಮಾರುಕಟ್ಟೆಗಳಿಗೆ ಬರುತ್ತಿದ್ದ ಮೀನುಗಳ ಪೂರೈಕೆಯಲ್ಲಿ ದೊಡ್ಡ ವ್ಯತ್ಯಯವಾಗಿದೆ. ಪರಿಣಾಮ ಮೀನುಗಳ ಬೆಲೆಯಲ್ಲಿ ಶೇ. 50ರಷ್ಟು ಏರಿಕೆಯಾಗಿದೆ. ಇನ್ನು ಸಾಮಾನ್ಯವಾಗಿ ಮೀನು ಖರೀದಿ ಮಾಡುತ್ತಿದ್ದ ಗ್ರಾಹಕರು ವಿಪರೀತವಾಗಿ ಬೆಲೆ ಹೆಚ್ಚಳವಾಗಿರುವ ಬಗ್ಗೆ ಅಸಮಾಧಾನ ಹೊರಹಾಕಿದ್ದಾರೆ.

ಬೆಂಗಳೂರಲ್ಲಿ ರಸ್ತೆಬದಿ ಪಾರ್ಕಿಂಗ್‌ಗೆ ಹೊಸ ವ್ಯವಸ್ಥೆ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡಿ ಸಂಚಾರ ದಟ್ಟಣೆ ಉಂಟುಮಾಡುವ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ನೂತನ ಪಾರ್ಕಿಂಗ್ ಪಾಲಿಸಿಯನ್ನು ಜಾರಿಗೆ ತರಲು ತೆರೆಮರೆಯಲ್ಲಿ ಸಿದ್ಧತೆ ನಡೆಸಿದೆ. ಫುಟ್‌ಪಾತ್ ಒತ್ತುವರಿ ತೆರವು ಹಾಗೂ ಅನಾಥ ವಾಹನಗಳ ತೆರವು ಕಾರ್ಯಾಚರಣೆಯ ಬಳಿಕ ಈ ನೀತಿ ಜಾರಿಗೊಳಿಸುವ ಸಾಧ್ಯತೆ ಇದೆ.

ಈ ಸಂಬಂಧ ಐದು ನಗರಪಾಲಿಕೆಗಳಿಗೂ ತಮ ವ್ಯಾಪ್ತಿಯ ರಸ್ತೆಗಳಲ್ಲಿ ಪಾರ್ಕಿಂಗ್‌ಗೆ ಯೋಗ್ಯ ಸ್ಥಳಗಳ ಮಾಹಿತಿ ನೀಡುವಂತೆ ಜಿಬಿಎ ಮುಖ್ಯ ಆಯುಕ್ತರು ಸೂಚನೆ ನೀಡಿದ್ದಾರೆ.

ಜನಸಂದಣಿ ಹೆಚ್ಚಿರುವ ಮಾರುಕಟ್ಟೆಗಳು, ವಾಣಿಜ್ಯ ಪ್ರದೇಶಗಳು, ಹೆಚ್ಚು ವಾಹನ ನಿಲುಗಡೆಯಾಗುವ ರಸ್ತೆಗಳು ಹಾಗೂ ಪಾರ್ಕಿಂಗ್ ಬೇಡಿಕೆ ಇರುವ ಸ್ಥಳಗಳ ಸಮಗ್ರ ಪಟ್ಟಿಯನ್ನು ಸಿದ್ಧಪಡಿಸುವಂತೆ ಸೂಚಿಸಲಾಗಿದೆ.

ಮುಖ್ಯ ಆಯುಕ್ತರ ನಿರ್ದೇಶನದ ಬೆನ್ನಲ್ಲೇ ಐದು ನಗರಪಾಲಿಕೆಗಳ ಆಯುಕ್ತರು ತಮ ವ್ಯಾಪ್ತಿಯ ಪ್ರಮುಖ ರಸ್ತೆಗಳನ್ನು ಗುರುತಿಸುವ ಕಾರ್ಯ ಆರಂಭಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ಸಂಚಾರ ಪೊಲೀಸ್ ಇಲಾಖೆಯ ಸಹಕಾರವನ್ನೂ ಪಡೆಯಲಾಗುತ್ತಿದ್ದು, ರಸ್ತೆಬದಿ ಪಾರ್ಕಿಂಗ್‌ಗೆ ಸೂಕ್ತ ಸ್ಥಳಗಳನ್ನು ಗುರುತಿಸುವ ಕೆಲಸ ನಡೆಯುತ್ತಿದೆ.

ಲೋಕಸಭೆಯಲ್ಲಿ ವಿಪಕ್ಷಗಳ ಭಾರಿ ಗದ್ದಲ ಮತ್ತು ಆಡಳಿತ ಪಕ್ಷದ ತೀವ್ರ ಆಕ್ಷೇಪದ ನಡುವೆಯೇ 'ಸಾರ್ವಜನಿಕ ಪರೀಕ್ಷೆಗಳ (ಅಕ್ರಮ ತಡೆ) ತಿದ್ದುಪಡಿ ವಿಧೇಯಕ-2026' ಧ್ವನಿ ಮತದ ಮೂಲಕ ಅಂಗೀಕಾರಗೊಂಡಿದೆ. ನೀಟ್ ಪರೀಕ್ಷಾ ಅಕ್ರಮದ ವಿರುದ್ಧ ಜಂತರ್ ಮಂತರ್‌ನಲ್ಲಿ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳ ಮೇಲಿನ ಪೊಲೀಸ್ ಬಲಪ್ರಯೋಗಕ್ಕೆ ಗೃಹ ಸಚಿವ ಅಮಿತ್ ಶಾ ನೇರ ಹೊಣೆ ಎಂದು ರಾಹುಲ್ ಗಾಂಧಿ ಆರೋಪಿಸಿದರು. ಇದಕ್ಕೆ ತೀಕ್ಷ್ಣ ತಿರುಗೇಟು ನೀಡಿದ ಸಚಿವ ಜಿತೇಂದ್ರ ಸಿಂಗ್, ಬಲಪ್ರಯೋಗಕ್ಕೆ ಆದೇಶ ನೀಡುವ ಅಧಿಕಾರ ಮ್ಯಾಜಿಸ್ಟ್ರೇಟ್‌ಗೆ ಇದೆಯೇ ಹೊರತು ಸಚಿವರಿಗಲ್ಲ ಎಂದು ತಿರಸ್ಕರಿಸಿದರು. ಕೋಲಾಹಲ ಸೃಷ್ಟಿಯಾದ ಹಿನ್ನೆಲೆಯಲ್ಲಿ ವಿಧೇಯಕ ಅಂಗೀಕರಿಸಿ ಕಲಾಪವನ್ನು ಮುಂದೂಡಲಾಯಿತು.

ಅಮಿತ್ ಶಾ ವಿರುದ್ಧವೂ ಆರೋಪ

ವಿಪಕ್ಷ ಅಬ್ಬರ ಮಸೂದೆ ಅಂಗೀಕಾರ

- ಲೋಕಸಭೆಯಲ್ಲಿ ಪರೀಕ್ಷಾ ಅಕ್ರಮ ತಡೆ ಮಸೂದೆ ಅಂಗೀಕಾರ
- ಪ್ರಶ್ನೆಪತ್ರಿಕೆ ಸೋರಿಕೆ ವಿರೋಧಿ ವಿಧೇಯಕ ಅಂಗೀಕರಿಸಿದ ಲೋಕಸಭೆ
- ತಪ್ಪಿತಸ್ಥರಿಗೆ ಕಠಿಣ ಜೈಲು ಶಿಕ್ಷೆ, ಹೆಚ್ಚಿನ ದಂಡ! ವಿರೋಧ ಪಕ್ಷಗಳ ಭಾರಿ ಗದ್ದಲ

• ಉದಯವಾಹಿನಿ, ನವದೆಹಲಿ

ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಸಂಘಟಿತ ಪರೀಕ್ಷಾ ವಂಚನೆಯನ್ನು ಕಟ್ಟುನಿಟ್ಟಾಗಿ ಹತ್ತಿಕ್ಕುವ ಗುರಿ ಹೊಂದಿರುವ ಸಾರ್ವಜನಿಕ ಪರೀಕ್ಷೆ (ಅನ್ಯಾಯಯುತ ವಿಧಾನಗಳ ತಡೆಗಟ್ಟುವಿಕೆ) ತಿದ್ದುಪಡಿ ಮಸೂದೆ - 2026ರನ್ನು ಲೋಕಸಭೆ ಬುಧವಾರ ಧ್ವನಿ ಮತದ ಮೂಲಕ ಅಂಗೀಕರಿಸಿದೆ. ಮಳೆಗಾಲದ ಅಧಿವೇಶನದಲ್ಲಿ ವಿರೋಧ ಪಕ್ಷದ ಸದಸ್ಯರ ಪ್ರತಿಭಟನೆ ಮತ್ತು ಘೋಷಣೆಗಳ ನಡುವೆಯೇ ಮಸೂದೆಗೆ ಅಂಗೀಕಾರ ದೊರಕಿದೆ.

ಜುಲೈ 25ರಂದು ಮಸೂದೆಯ ಪ್ರತಿಗಳನ್ನು ಸಂಸತ್ತಿನ ಸದಸ್ಯರಿಗೆ ವಿತರಿಸಲಾಗಿತ್ತು. ಕೇಂದ್ರ ಸಚಿವ ಜಿತೇಂದ್ರಸಿಂಗ್ ಜುಲೈ 27ರಂದು ವಿಧೇಯಕವನ್ನು ಮಂಡಿಸಿದ್ದರು. ಸಂಘಟಿತ ವಂಚನೆ ಜಾಲಗಳ ವಿರುದ್ಧ ಶಿಕ್ಷೆಗಳನ್ನು ಹೆಚ್ಚಿಸುವ ಮತ್ತು ನಿಬಂಧನೆಗಳನ್ನು ಬಿಗಿಗೊಳಿಸುವ ಮೂಲಕ ಅಸ್ತಿತ್ವದಲ್ಲಿರುವ ಪ್ರಶ್ನೆಪತ್ರಿಕೆ ಸೋರಿಕೆ ವಿರೋಧಿ ಕಾನೂನನ್ನು ಬಲಪಡಿಸಲು ಈ ಶಾಸನವು ಪ್ರಯತ್ನಿಸುತ್ತದೆ.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿವಾದದ ಕುರಿತು ನಡೆಯುತ್ತಿರುವ ರಾಜಕೀಯ ಗದ್ದಲದ ನಡುವೆ ವಿಧೇಯಕವನ್ನು ಅಂಗೀಕರಿಸಲಾಗಿದೆ. ಸದನದಲ್ಲಿ ಚರ್ಚೆಗೆ ಉತ್ತರಿಸಿದ ಸಚಿವಸಿಂಗ್, ತಿದ್ದುಪಡಿಗಳು ಸಾರ್ವಜನಿಕ ಪರೀಕ್ಷೆಗಳನ್ನು ಹೆಚ್ಚು ಪಾರದರ್ಶಕ, ವಿಶ್ವಾಸಾರ್ಹ ಮತ್ತು ಸುರಕ್ಷಿತವಾಗಿಸುವ ಸರ್ಕಾರದ ಬದ್ಧತೆಯನ್ನು ಪ್ರತಿಬಿಂಬಿಸುತ್ತವೆ ಎಂದು ಪ್ರತಿಪಾದಿಸಿದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಕೇಂದ್ರ ಸರ್ಕಾರವು ತ್ವರಿತವಾಗಿ ಕ್ರಮ ಕೈಗೊಂಡಿದ್ದು, 2024ರಲ್ಲಿ ಜಾರಿಗೆ ಬಂದ ನಂತರ ಕಾನೂನು ಚೌಕಟ್ಟನ್ನು ಬಲಪಡಿಸಲು ಕಾನೂನನ್ನು ಜಾರಿಗೆ ತಂದ ಅನುಭವವನ್ನು ಬಳಸಿಕೊಳ್ಳುತ್ತಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ.

ಅಧಿಕೃತ ಡೇಟಾ ಉಲ್ಲೇಖಿಸಿ, 2024ರಿಂದ ಪ್ರಶ್ನೆ ಪತ್ರಿಕೆ ಸೋರಿಕೆ ವಿರೋಧಿ ಕಾನೂನಿನಡಿಯಲ್ಲಿ 52 ಎಫ್‌ಐಆರ್‌ಗಳು ದಾಖಲಾಗಿವೆ ಎಂದು ಸಚಿವರು ತಿಳಿಸಿದರು. ಇತ್ತೀಚಿನ ವರ್ಷಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಘಟನೆಗಳಿಗೆ ಸಂಬಂಧಿಸಿದ ಆತ್ಮಹತ್ಯೆಗಳು ಕಡಿಮೆಯಾಗಿವೆ ಎಂದು ಅವರು ಹೇಳಿಕೊಂಡರು. ಇದು ಕಾನೂನಿನ ಪ್ರಭಾವದ ಪ್ರೋತ್ಸಾಹದಾಯಕ ಸಂಕೇತವಾಗಿದೆ ಎಂದು ಅವರು ವಿವರಿಸಿದರು. ತಿದ್ದುಪಡಿ ಮಾಡಿದ ಕಾನೂನು ಪರೀಕ್ಷಾ ವಂಚನೆಯಲ್ಲಿ ತೊಡಗುವವರಿಗೆ ಗಣನೀಯ ಪ್ರಮಾಣದಲ್ಲಿ ಶಿಕ್ಷೆಯನ್ನು ಹೆಚ್ಚಿಸಲಾಗಿದೆ.

ಪ್ರಶ್ನೆ ಪತ್ರಿಕೆ ಸೋರಿಕೆಯಲ್ಲಿ ತಪ್ಪಿತಸ್ಥರೆಂದು ಕಂಡುಬಂದ ವ್ಯಕ್ತಿಗಳು ಈಗ 10 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 50 ಲಕ್ಷ ರೂ. ದಂಡವನ್ನು ಎದುರಿಸಬೇಕಾಗುತ್ತದೆ. ಇನ್ನು ಅಂತಹ ಅಪರಾಧಗಳಲ್ಲಿ ಭಾಗಿಯಾಗಿರುವ ಸಂಘಟಿತ ಅಪರಾಧ ಸಿಂಡಿಕೇಟ್‌ಗಳಿಗೆ ಏಳರಿಂದ 10 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 10 ಕೋಟಿ ರೂ.ಗಳಿಂದ ಪ್ರಾರಂಭವಾಗುವ ದಂಡ ವಿಧಿಸಬಹುದು. ವಂಚನೆಯಲ್ಲಿ ತಪ್ಪಿತಸ್ಥರೆಂದು ಕಂಡುಬಂದ ಸೇವಾ ಪೂರೈಕೆದಾರರು, ಹೆಚ್ಚಿನ ದಂಡ ಮತ್ತು ಸಾರ್ವಜನಿಕ ಪರೀಕ್ಷೆಗಳನ್ನು ನಡೆಸದಂತೆ ದೀರ್ಘಾವಧಿಯ ನಿಷೇಧ ಹೇರುವ ಕಠಿಣ ಶಿಕ್ಷೆಗಳಿಗೆ ಗುರಿಯಾಗಬೇಕಾಗುತ್ತದೆ. ಭಾಗಿಯಾಗಿರುವ ಹಿರಿಯ ಕಾರ್ಯನಿರ್ವಾಹಕರು ಜೈಲು ಶಿಕ್ಷೆ ಮತ್ತು ಭಾರಿ ಆರ್ಥಿಕ ದಂಡವನ್ನು ಸಹ ಎದುರಿಸಬೇಕಾಗುತ್ತದೆ.

10 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 50 ಲಕ್ಷ ರೂ. ದಂಡ

ಆಡಳಿತ ಪಕ್ಷದ ಆಕ್ಷೇಪ

ರಾಹುಲ್‌ಗಾಂಧಿ ಅವರ ಈ ಆರೋಪಗಳಿಗೆ ಬಿಜೆಪಿ ಸಂಸದರು ಹಾಗೂ ಸಚಿವರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ರಾಹುಲ್ ಗಾಂಧಿ ತಮ್ಮ ಆರೋಪಕ್ಕೆ ಪುರಾವೆ ನೀಡಬೇಕು ಅಥವಾ ದೇಶದ ಕ್ಷಮೆ ಕೇಳಬೇಕು ಎಂದು ಪಟ್ಟು ಹಿಡಿದರು. ಪರಿಸ್ಥಿತಿ ಕೈಮೀರುತ್ತಿದ್ದಂತೆ ಸ್ಪೀಕರ್ ಓಂ ಬಿರ್ಲಾ ಅವರು ರಾಹುಲ್ ಗಾಂಧಿ ಅವರ ಕೆಲವು ವಿವಾದಾತ್ಮಕ ಹೇಳಿಕೆಗಳನ್ನು ಸಂಸತ್ತಿನ ನಡಾವಳಿಯಿಂದ ತೆರವುಗೊಳಿಸಿದರು.

ವಿರೋಧ ಪಕ್ಷಗಳ ತೀವ್ರ ಗದ್ದಲ ಮತ್ತು ಸಭಾತ್ಯಾಗದ ನಡುವೆಯೂ, ಪರೀಕ್ಷಾ ಅಕ್ರಮ ಎಸಗುವವರ ವಿರುದ್ಧ ಕಠಿಣ ಶಿಕ್ಷೆ ಮತ್ತು ದಂಡ ವಿಧಿಸುವ ನಿಬಂಧನೆಗಳನ್ನು ಹೊಂದಿರುವ 'ಸಾರ್ವಜನಿಕ ಪರೀಕ್ಷೆಗಳ ತಿದ್ದುಪಡಿ ವಿಧೇಯಕವನ್ನು ಲೋಕಸಭೆಯಲ್ಲಿ ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು.

ಭಾಷಣದ ವೇಳೆ ರಾಹುಲ್ ಗಾಂಧಿ ಅವರು ಬಳಸಿದ ಇಡಿಯಟ್ ಹಾಗೂ ಅಂಧಭಕ್ತ ಪದಗಳು ಸದನದಲ್ಲಿ ಭಾರೀ ಗದ್ದಲಕ್ಕೆ ಕಾರಣವಾದವು. ದೇಶದ ಭವಿಷ್ಯ ನಮ್ಮ ಬೀದಿಗಳಲ್ಲಿ ವ್ಯಕ್ತವಾಗಿರುವುದನ್ನು ನೋಡಿ ನನಗೆ ತುಂಬಾ ಉತ್ಸಾಹವಾಯಿತು. ಅದು ಕೋಪವಲ್ಲ, ಹಿಂಸೆಯಲ್ಲ, ದ್ವೇಷವೂ ಅಲ್ಲ. ಅದು ಈ ದೇಶದ ಯುವಜನತೆ ಹಾಗೂ ಮುಂದಿನ ಪೀಳಿಗೆಯ ಆಳವಾದ ಅಭಿವ್ಯಕ್ತಿಯಾಗಿತ್ತು. ಬಿಜೆಪಿ ಸ್ನೇಹಿತರೂ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು ಈ ಅಭಿವ್ಯಕ್ತಿಯನ್ನು ಗೌರವಿಸಬೇಕು. ಬಿಜೆಪಿ ನಾಯಕರು ತಮ್ಮ ಮಕ್ಕಳನ್ನೇ ಕೇಳಿದರೂ, ವಿದ್ಯಾರ್ಥಿಗಳ ಹೋರಾಟವನ್ನು ಅವರು ಬೆಂಬಲಿಸುತ್ತಾರೆ.

ನಡೆದಿರುವುದರಲ್ಲಿ ತಪ್ಪೇನೂ ಇಲ್ಲ. ಪ್ರತಿಯೊಬ್ಬ ಭಾರತೀಯರೂ ಈ ಹೋರಾಟದ ಬಗ್ಗೆ ಹೆಮ್ಮೆಪಡಬೇಕು ಎಂದು ರಾಹುಲ್ ಗಾಂಧಿ ಹೇಳಿದರು. ತಮ್ಮ ಭಾಷಣದಲ್ಲಿ ವಿದ್ಯಾರ್ಥಿನಿಯೊಬ್ಬಳೊಂದಿಗೆ ನಡೆದ ಸಂಭಾಷಣೆಯನ್ನು ಉಲ್ಲೇಖಿಸಿದ ರಾಹುಲ್, ನಾನು ಒಬ್ಬ ವಿದ್ಯಾರ್ಥಿನಿಗೆ 'ವಿದ್ಯಾರ್ಥಿ ಎಂದರೆ ಏನು?' ಎಂದು ಕೇಳಿದೆ. ಅದಕ್ಕೆ ಆಕೆ, 'ತೆರೆದ ಮನಸ್ಸು ಮತ್ತು ತೆರೆದ ಹೃದಯ ಹೊಂದಿರುವವನೇ ವಿದ್ಯಾರ್ಥಿ. ತನಗೆ ಎಲ್ಲವೂ ಗೊತ್ತಿಲ್ಲ ಎಂಬ ವಿನಯ ಅವನಲ್ಲಿರುತ್ತದೆ. ಜ್ಞಾನ ನಿರಂತರವಾಗಿ ಬದಲಾಗುತ್ತದೆ ಎಂಬ ಅರಿವು ಅವನಿಗಿರುತ್ತದೆ. ವಿದ್ಯಾರ್ಥಿಯ ಅತ್ಯಂತ ದೊಡ್ಡ ಗುಣ ವಿನಯ' ಎಂದು ಹೇಳಿದಳು ಎಂದು ವಿವರಿಸಿದರು.

ಇಡಿಯಟ್-ಅಂಧಭಕ್ತ ಪದ ಬಳಕೆ, ವ್ಯಾಪಕ ಆಕ್ರೋಶ

ವಂದೇ ಮಾತರಂ ಗೀತೆಗೆ ಅವಮಾನ ಮಾಡುವುದು ಕ್ರಿಮಿನಲ್ ಅಪರಾಧ

ರಾಷ್ಟ್ರೀಯ ಗೀತೆಯಾದ 'ವಂದೇ ಮಾತರಂ'ಗೆ ಅವಮಾನ ಮಾಡುವುದನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸುವ ಮಹತ್ವದ ವಿಧೇಯಕವನ್ನು ರಾಜ್ಯಸಭೆ ಇಂದು ಅಂಗೀಕರಿಸಿದೆ. ರಾಷ್ಟ್ರಗೀತೆಯಾದ ಜನಗಣಮನ ಗೀತೆಗೆ ನೀಡುವ ಗೌರವವನ್ನೇ ವಂದೇ ಮಾತರಂ ಗೀತೆಗೂ ನೀಡಬೇಕೆಂದು ಉಲ್ಲೇಖಿಸಲಾಗಿದೆ. 'ರಾಷ್ಟ್ರೀಯ ಗೌರವಕ್ಕೆ ಅಪಮಾನ ತಡೆ (ತಿದ್ದುಪಡಿ) ವಿಧೇಯಕ 2026' ಅನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು. ಇಂದು ಬೆಳಗ್ಗೆ ಎರಡು ಬಾರಿ ಕಲಾಪ ಮುಂದೂಡಲ್ಪಟ್ಟ ನಂತರ, ಮಧ್ಯಾಹ್ನದ ಭೋಜನದ ಬಳಿಕ ಸದನ ಸಮಾವೇಶಗೊಳ್ಳುತ್ತಿದ್ದಂತೆ ಉಪಸಭಾಪತಿ ಹರಿವಂಶ್ ಅವರು ಪ್ರತಿಭಟನೆ ನಡೆಸುತ್ತಿದ್ದ ಸದಸ್ಯರಿಗೆ ಕಲಾಪದ ಘನತೆಯನ್ನು ಕಾಯ್ದುಕೊಳ್ಳುವಂತೆ ಮನವಿ ಮಾಡಿದರು.

ಪರಿಶೀಲನೆ ಮತ್ತು ಅಂಗೀಕಾರಕ್ಕಾಗಿ ಪಟ್ಟಿಯಾಗಿದ್ದ ಈ ವಿಧೇಯಕದ ಮೇಲಿನ ಚರ್ಚೆಯನ್ನು ಪೀಠವು ಕೈಗೆತ್ತಿಕೊಳ್ಳುತ್ತಿದ್ದಂತೆ, ವಿರೋಧ ಪಕ್ಷಗಳು ತಮ್ಮ ಪ್ರತಿಭಟನೆಯನ್ನು ಮುಂದುವರಿಸಿದವು ಮತ್ತು ಘೋಷಣೆಗಳನ್ನು ಕೂಗಿದವು. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಖಂಡಿಸಿ ರಾಜಧಾನಿಯಲ್ಲಿ ಪ್ರತಿಭಟನೆ ನಡೆಸಿದವರ ಮೇಲಿನ ಪೊಲೀಸ್ ಕ್ರಮಕ್ಕೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪ್ರತಿಕ್ರಿಯಿಸಬೇಕು ಎಂದು ಅವರು ಆಗ್ರಹಿಸಿದರು.



ಜಿತೇಂದ್ರ ಸಿಂಗ್ ತಿರುಗೇಟು

ರಾಹುಲ್ ಗಾಂಧಿ ಅವರ ಆರೋಪಗಳಿಗೆ ಪ್ರತಿಕ್ರಿಯಿಸಿದ ಸಚಿವ ಜಿತೇಂದ್ರ ಸಿಂಗ್ ಅವರು, ಅವರ ಹಿಂದಿನ ಹೇಳಿಕೆಗಳನ್ನು ಅಸಂಸದೀಯ ಎಂದು ಕರೆದರು. ಗೃಹ ಸಚಿವ ಅಮಿತ್ ಶಾ ವಿರುದ್ಧ ರಾಹುಲ್ ಗಾಂಧಿ ಅವರ ಆರೋಪಗಳನ್ನು ಅವರು ಅಲ್ಲಗೆಳೆದ ಅವರು ಈ ಹೇಳಿಕೆಗಳು ಆಧಾರರಹಿತವಾಗಿವೆ. ಗುಂಡು ಹಾರಿಸಲು ಆದೇಶ ನೀಡುವ ಅಧಿಕಾರ ಇರುವುದು ಮ್ಯಾಜಿಸ್ಟ್ರೇಟ್ ರಿಗೇ ಹೊರತು ಸಚಿವರಿಗಲ್ಲ ಎಂದು ಹೇಳಿದರು. ಪ್ರಧಾನಿ ಮೋದಿಯವರ ನಿವಾಸದ ಹೊರಗೆ ರಾಹುಲ್ ಗಾಂಧಿ ನಡೆಸಿದ ಪ್ರತಿಭಟನೆಯನ್ನು ಸಹ ಉಲ್ಲೇಖಿಸಿದ ಜಿತೇಂದ್ರ ಸಿಂಗ್ ಅವರು ರಾಹುಲ್ ಗಾ

ಕ್ರಿಕೆಟ್ ಗ್ರೌಂಡ್‌ನಲ್ಲಿ ರಕ್ತಸಿಕ್ತ ರುಂಡ ಪತ್ತೆ ಪ್ರಕರಣ: ಪೊಲೀಸ್ ತನಿಖೆಯಲ್ಲಿ ಅಸಲಿ ಸತ್ಯ ಬಯಲು!

• ಉದಯವಾಹಿನಿ, ಬೆಂಗಳೂರು

ವರ್ತೂರು ಠಾಣೆ ವ್ಯಾಪ್ತಿಯ ಕೊಡತಿ ಸಮೀಪದ ಕ್ರಿಕೆಟ್ ಗ್ರೌಂಡ್‌ನಲ್ಲಿ ವ್ಯಕ್ತಿಯೊಬ್ಬರ ರುಂಡ ಪತ್ತೆಯಾದ ಘಟನೆ ಸ್ಥಳೀಯರಲ್ಲಿ ತೀವ್ರ ಆತಂಕ ಮೂಡಿಸಿತ್ತು. ಆರಂಭದಲ್ಲಿ ಇದೊಂದು ಭೀಕರ ಹತ್ಯೆ ಇರಬಹುದೆಂಬ ಶಂಕೆ ವ್ಯಕ್ತವಾಗಿತ್ತಾದರೂ, ಘಟನಾ ಸ್ಥಳಕ್ಕೆ ಧಾವಿಸಿ ಪೊಲೀಸರು ತನಿಖೆ ನಡೆಸಿದಾಗ ಇದೊಂದು ಆತ್ಮಹತ್ಯೆ ಎಂಬುದು ಬಯಲಾಗಿದೆ.

ಮೃತನನ್ನು ಆಂಧ್ರಪ್ರದೇಶದ ಚಿತ್ತೂರು ಮೂಲದ ವಿಶ್ವನಾಥ್ (25) ಎಂದು ಗುರುತಿಸಲಾಗಿದೆ. ವೈಯಕ್ತಿಕ ಕಾರಣದಿಂದ ನೊಂದಿದ್ದ ವಿಶ್ವನಾಥ್, ಮಂಗಳವಾರ ತನ್ನ ಸ್ನೇಹಿತೆಗೆ ಕರೆ ಮಾಡಿ ಮಾತನಾಡಿದ್ದ. ಬಳಿಕ ರಾತ್ರಿ 8:30ರಿಂದ 9 ಗಂಟೆ ಸುಮಾರಿಗೆ ರೈಲಿಗೆ ತಲೆಕೊಟ್ಟು ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ತಿಳಿದುಬಂದಿದೆ.

ರೈಲು ಹರಿದ ರಭಸಕ್ಕೆ ತಲೆ ಆತನ ದೇಹದಿಂದ ಸಂಪೂರ್ಣವಾಗಿ ಬೇರ್ಪಟ್ಟು ದೂರಕ್ಕೆ ಎಸೆಯಲ್ಪಟ್ಟಿತ್ತು. ಘಟನೆಯ ಮಾಹಿತಿ ತಿಳಿದು ರಾತ್ರಿಯೇ ಸ್ಥಳಕ್ಕೆ ಆಗಮಿಸಿದ್ದ ರೈಲ್ವೆ ಪೊಲೀಸರು ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡು ಪರಿಶೀಲನೆ ನಡೆಸಿದ್ದರು. ಆದರೆ, ಕತ್ತಲಲ್ಲಿ ಕೇವಲ ತಲೆಯಿಲ್ಲದ ಶರೀರ ಮಾತ್ರ ರೈಲ್ವೆ ಪೊಲೀಸರಿಗೆ ಪತ್ತೆಯಾಗಿತ್ತು.

ರೈಲ್ವೆ ಹಳಿಯಿಂದ ಸ್ವಲ್ಪ ದೂರದಲ್ಲಿ ಬಿದ್ದಿದ್ದ ವಿಶ್ವನಾಥ್ ಅವರ ರುಂಡವನ್ನು ಬೀದಿ ನಾಯಿಗಳು ಕಚ್ಚಿಕೊಂಡು, ಸುಮಾರು 300 ಮೀಟರ್ ದೂರದಲ್ಲಿದ್ದ ಕ್ರಿಕೆಟ್ ಗ್ರೌಂಡ್‌ಗೆ ತಂದಿವೆ. ಬೆಳಗ್ಗೆ ಆಟವಾಡಲು ಬಂದ ಸ್ಥಳೀಯರು ರುಂಡವನ್ನು ಕಂಡು ಬೆಚ್ಚಿಬಿದ್ದು, ತಕ್ಷಣವೇ ಪೊಲೀಸ್ ತುರ್ತು ಸಹಾಯವಾಣಿಗೆ ಕರೆ ಮಾಡಿದ್ದರು. ಮಾಹಿತಿ ಲಭ್ಯವಾಗುತ್ತಿದ್ದಂತೆ ಸ್ಥಳಕ್ಕೆ ಧಾವಿಸಿದ ವರ್ತೂರು ಪೊಲೀಸರು ಪರಿಶೀಲನೆ ನಡೆಸಿ, ಪ್ರಕರಣದ ತನಿಖೆ ಕೈಗೊಂಡು ನೈಜತೆಯನ್ನು ಪತ್ತೆ ಹಚ್ಚಿದ್ದಾರೆ.

ತಲೆ ಸಿಕ್ಕ ಗ್ರೌಂಡ್‌ನಿಂದ ಸುಮಾರು 300 ಮೀಟರ್ ದೂರದಲ್ಲಿ ರೈಲ್ವೆ ಹಳಿಯಿದೆ. ಆ ಏರಿಯಾದಲ್ಲಿ ರಾತ್ರಿ ಘಟನೆ ಸಂಭವಿಸಿದೆ. ಬೈಯಪ್ಪನಹಳ್ಳಿ ರೈಲ್ವೆ ಠಾಣೆ ಪೊಲೀಸರು ಅದಾಗಲೇ ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಸಿ.ವಿ. ರಾಮನ್ ಆಸ್ಪತ್ರೆಗೆ ರವಾನಿಸಿದ್ದರು.

ಪ್ರಕರಣದ ಮುಂದಿನ ತನಿಖೆಯನ್ನು ರೈಲ್ವೆ ಪೊಲೀಸರು ಕೈಗೆತ್ತಿಕೊಂಡಿದ್ದಾರೆ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಸೈದುಲು ಅಡಾವತ್ ತಿಳಿಸಿದ್ದಾರೆ.

ಇಂದಿನ ಸಮಾಜದಲ್ಲಿ ಮಹಿಳಾ ಮತ್ತು ಮಕ್ಕಳು ಜಾಲತಾಣದಿಂದ ದೂರವಿಡಬೇಕಾದ ಪರಿಸ್ಥಿತಿ ಹೆಚ್ಚಿದೆ

• ಉದಯವಾಹಿನಿ, ಕೆ.ಆರ್.ಪುರ:

ಸಾಮಾಜಿಕ ಜಾಲತಾಣದಿಂದ ಆಗುವ ಸಮಸ್ಯೆ ಮತ್ತು ವಿವಾಹ ವಿಚ್ಛೇದನಕ್ಕೆ ಕಾರಣಗಳು ಹಾಗೂ ಪರಿಹಾರದ ಬಗ್ಗೆ ಸಮಾಜಸೇವಕಿ ಸುಜಾತಾ ಪ್ರೇಮಕುಮಾರ್ ಮಾಹಿತಿ ನೀಡಿದರು. ಮಹದೇವಪುರ ಕ್ಷೇತ್ರದ ಹಿಮ್ಮಡಿಹಳ್ಳಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಆಯೋಜಿಸಿದ ತಾಲ್ಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಮತನಾಡಿದ ಅವರು, ಇಂದಿನ ಸಮಾಜದಲ್ಲಿ ಮಹಿಳಾ ಮತ್ತು ಮಕ್ಕಳು ಜಾಲತಾಣದಿಂದ ದೂರವಿಡಬೇಕಾದ ಪರಿಸ್ಥಿತಿ ಹೆಚ್ಚಿದೆ, ಇದರಿಂದ ಒತ್ತಡ ಮತ್ತು ಖಿನ್ನತೆ, ನಿದ್ರಾಹೀನತೆ, ಏಕಾಗ್ರತೆಯ ಕೊರತೆ, ಖಾಸಗಿತನಕ್ಕೆ ಧಕ್ಕೆ ಇದೆ ಎಂದರು. ಸಂವಹನದ ಕೊರತೆ, ಹಣಕಾಸಿನ ಸಮಸ್ಯೆಗಳು, ದೈಹಿಕ ಹಾಗೂ ಮಾನಸಿಕ ಹಿಂಸೆ ವಿಚ್ಛೇದನಕ್ಕೆ ಕಾರಣಗಳಾಗಿದ್ದು, ಯಾವುದೇ ಸಮಸ್ಯೆಗೆ ಪರಿಹಾರ

ಉದಯವಾಹಿನಿ ಚಿತ್ರ

ಮುಕ್ತ ಮಾತುಕತೆ, ಸಮಯ ಮತ್ತು ಹೊಂದಾಣಿಕೆ, ಸಮಾಲೋಚನೆಗಳನ್ನು ಮಾಡಬೇಕಿದೆ ಎಂದು ಮಾಹಿತಿ ನೀಡಿದರು. ಬೆಂ.ಪೂರ್ವ ನಿರ್ದೇಶಕರಾದ ಪದ್ಮಯ್ಯ, ಯೋಜನಾಧಿಕಾರಿ ಪುರುಷೋತ್ತಮ್, ಜ್ಞಾನ ವಿಕಾಸ ಯೋಜನಾಧಿಕಾರಿ ಸಂಗೀತಾ, ಸ್ಥಳೀಯ ಮುಖಂಡ ಪ್ರೇಮ್ ಕುಮಾರ್, ಜೆವಿಕೆ ಮದಾಲಾಂಬಿಕ, ಸೇವಾ ಪ್ರತಿನಿಧಿ ಸೌಭಾಗ್ಯ, ಪದಾಧಿಕಾರಿಗಳಾದ ಲಾವಣ್ಯ, ಜಯ, ಶೀಲಾ, ಪ್ರಭಾ, ಆಶಾ ಮತ್ತಿತರರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಖತರ್ನಾಕ್ ಕಳ್ಳ; ವಿಶೇಷ ಚೇತನನಂತೆ ನಟಿಸಿ ಭಿಕ್ಷಾಟನೆ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ವ್ಯಕ್ತಿಯೊರ್ವ ಕೈ - ಕಾಲುಗಳು ಸರಿಯಿದ್ದರೂ ಅಂಗವೈಕಲ್ಯ ಹೊಂದಿರುವಂತೆ ನಟಿಸಿ ಹಣ ವಸೂಲಿ ಮಾಡುತ್ತಿದ್ದ ಆಘಾತಕಾರಿ ಘಟನೆ ನಡೆದಿದೆ. ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ಈ ಘಟನೆ ನಡೆದಿದೆ. ಈತ ಕಾಲು ಊನವಾಗಿರುವಂತೆ ನಟಿಸಿ ಸಾರ್ವಜನಿಕರ ಅನುಕಂಪ ಗಿಟ್ಟಿಸಿ ಹಣ ವಸೂಲಿ ಮಾಡುತ್ತಿದ್ದ. ರಸ್ತೆಯಲ್ಲಿ ಭಿಕ್ಷೆ ಬೇಡುತ್ತಿರುವಾಗ ವಾಕಿಂಗ್ ಸ್ಟಿಕ್ ಬಳಸುತ್ತಿದ್ದ. ಆದರೆ ಸ್ಥಳೀಯ ನಿವಾಸಿಗಳು ಆತನ ನಡವಳಿಕೆಯ ಬಗ್ಗೆ ಅನುಮಾನಗೊಂಡು ಪ್ರಶ್ನಿಸಿದಾಗ ಕೃತ್ಯ ಬೆಳಕಿಗೆ ಬಂತು. ಈ ಘಟನೆಯ ದೃಶ್ಯ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ನಕಲಿ ಭಿಕ್ಷಾಟನೆ ಜಾಲದ ಕುರಿತು ಚರ್ಚೆ ಆರಂಭವಾಗಿದೆ. ವೈರಲ್ ವಿಡಿಯೊದಲ್ಲಿ ಸ್ಥಳೀಯ ನಿವಾಸಿಗಳು ಆ ವ್ಯಕ್ತಿಯ ನಡವಳಿಕೆಯ ಬಗ್ಗೆ ಅನುಮಾನಗೊಂಡು ಪ್ರಶ್ನಿಸಿದರು. ಸ್ಥಳೀಯರಿಗೆ ಬೆದರಿದ ಆ ವ್ಯಕ್ತಿಯು ವಾಕಿಂಗ್ ಸ್ಟಿಕ್ ಅನ್ನು ಬಿಟ್ಟು ಯಾವುದೇ ತೊಂದರೆಯಿಲ್ಲದೆ ನಡೆದುಕೊಂಡು ಹೋಗುತ್ತಿರುವುದು ಕಂಡುಂದಿದೆ. ಈತನ ಈ ಕೃತ್ಯ ಬಯಲಾಗುತ್ತಿದ್ದಂತೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆತ ಐಫೋನ್ ದೋಚಿದ್ದಾನೆ ಎನ್ನುವ ಆರೋಪವೂ ಇದೆ. ದಿನ ನಿತ್ಯ ಈತ ವಾಕಿಂಗ್ ಸ್ಟಿಕ್ ಬಳಸಿ ಬಿಕ್ಷುಕನಂತೆ ನಟಿಸಿ ಸಾರ್ವಜನಿಕರಿಂದ ಹಣ ದೋಚುತ್ತಿದ್ದ. ಆದರೆ ವ್ಯಕ್ತಿಯ ವರ್ತನೆ ನೋಡಿ ಅನುಮಾನಗೊಂಡ ಸ್ಥಳೀಯರು ತಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

ಸಾರ್ವಜನಿಕರು ಒಟ್ಟಾಗಿ ಸೇರಿರುವುದನ್ನು ಗಮನಿಸಿ ತಬ್ಬಿಬ್ಬಾಗಿದ್ದಾನೆ. ಕೂಡಲೆ ತಾನು ಹಿಡಿದಿದ್ದ ವಾಕಿಂಗ್ ಸ್ಟಿಕ್ ಅನ್ನು ಅಲ್ಲೇ ಬಿಟ್ಟು ಏನು ತೊಂದರೆ ಇಲ್ಲದಂತೆ ನಡೆದುಕೊಂಡು ಹೋಗಿದ್ದಾನೆ.

ನಮ್ಮಲ್ಲಿ ತಮಿಳುನಾಡಿಗೆ ಬಿಡುವಷ್ಟು ಕಾವೇರಿ ನೀರಿಲ್ಲ: ಸಚಿವ ಎಂ.ಬಿ. ಪಾಟೀಲ್

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಕಾವೇರಿ ಜಲಾನಯನ ಪ್ರದೇಶದಲ್ಲಿ ಈ ವರ್ಷ ಒಳ್ಳೆಯ ಮಳೆಯೇ ಆಗಿಲ್ಲ. ಹೀಗಾಗಿ ಈ ವ್ಯಾಪ್ತಿಯ ಜಲಾಶಯಗಳಲ್ಲಿ ನೀರಿಲ್ಲ. ಹೀಗಿರುವಾಗ ಕಾವೇರಿ ನೀರು ನಿಯಂತ್ರಣ ಸಮಿತಿಯು ತಮಿಳುನಾಡಿಗೆ 4.50 ಟಿಎಂಸಿ ನೀರು ಹರಿಸುವಂತೆ ರಾಜ್ಯಕ್ಕೆ ಹೇಳಿರುವುದು ಸರಿಯಲ್ಲ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ. ಬುಧವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳ ಜತೆ ಅವರು ಮಾತನಾಡಿದರು.

ಚೆನ್ನಾಗಿ ಮಳೆಯಾದರೆ ಕಾವೇರಿ ನೀರಿನ ಹಂಚಿಕೆಯಲ್ಲಿ ಯಾವ ಸಮಸ್ಯೆಯೂ ಬರುವುದಿಲ್ಲ. ಅಂತಹ ವರ್ಷಗಳಲ್ಲಿ ನಾವು ನಿಗದಿತ 177 ಟಿಎಂಸಿಗಿಂತ ಹೆಚ್ಚು ನೀರನ್ನೇ ತಮಿಳುನಾಡಿಗೆ ಹರಿಸುತ್ತಿದ್ದೇವೆ. ಆದರೆ ಬರಗಾಲ ಬಂದಾಗ ಯಾವ ಸಂಕಷ್ಟ ಸೂತ್ರವೂ ಇಲ್ಲ. ಇದಕ್ಕೆಲ್ಲ ಮೇಕೆದಾಟು ಜಲಾಶಯ ನಿರ್ಮಾಣವೇ ಉತ್ತರ ಎಂದು ಪ್ರತಿಪಾದಿಸಿದ್ದಾರೆ.

ಕಾವೇರಿ ನೀರು ಹಂಚಿಕೆಯ ಅಂತಿಮ ತೀರ್ಪಿನಲ್ಲಿ ನಮಗೆ ಹೆಚ್ಚುವರಿಯಾಗಿ ಸಿಕ್ಕಿದ 14 ಟಿಎಂಸಿ ನೀರೂ ಸೇರಿ ಒಟ್ಟು 65 ಟಿಎಂಸಿ ನೀರನ್ನು ನಾವು ಸಂಗ್ರಹಿಸಿ ಇಟ್ಟುಕೊಳ್ಳಲು ವ್ಯವಸ್ಥೆ ಬೇಕಾಗಿದೆ. ಹೀಗಾಗಿ ನಾನು ಹಿಂದೆ ಜಲ ಸಂಪನ್ಮೂಲ ಸಚಿವನಾಗಿದ್ದಾಗಲೇ ಮೇಕೆದಾಟು ಯೋಜನೆಯ ಪರಿಕಲ್ಪನೆ ಬಂತು. ಇದರಿಂದ ತಮಿಳುನಾಡಿಗೂ ಪ್ರಯೋಜನವಿದೆ. ಆದರೆ ಅಲ್ಲಿಯ ಆಂತರಿಕ ರಾಜಕಾರಣವು ಇದಕ್ಕೆ ಆಸ್ಪದ ಕೊಡುತ್ತಿಲ್ಲ. ಇದರ ಬದಲು ಅವರು ಮೇಕೆದಾಟು ಜಲಾಶಯದಿಂದ ತಮಿಳುನಾಡಿಗೂ ಲಾಭವಿದೆ ಎನ್ನುವ ಸರಳ ಸತ್ಯವನ್ನು ಒಪ್ಪಿಕೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ. ಹಿಂದೆ ಜಲ ಸಂಪನ್ಮೂಲ ಖಾತೆಯನ್ನೂ ನಿರ್ವಹಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಈಗಿನ ಜಲ ಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಕೂತು, ಈಗಿನ ಬಿಕ್ಕಟ್ಟಿಗೆ ಪರಿಹಾರವನ್ನು ಹುಡುಕಲಿದ್ದಾರೆ. ಕೇಂದ್ರ ಸರ್ಕಾರದ ಸಮಿತಿ ಕೂಡ ಈಗಿನ ನೀರು ಸಂಗ್ರಹಣೆಗೆ ಸಂಬಂಧಿಸಿದ ವಿಡಿಯೋ ಮತ್ತು ಅಂಕಿಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ಆತಂಕಪಡುವ ವಿಷಯ! ಕರ್ನಾಟಕದಲ್ಲಿಯೇ ಅತಿ ಹೆಚ್ಚು ಬಾಲಕರು ಶಾಲೆ ತೊರೆಯುತ್ತಿದ್ದಾರಂತೆ

• ಉದಯವಾಹಿನಿ, ಬೆಂಗಳೂರು

ದೇಶದ ಪ್ರಮುಖ ರಾಜ್ಯಗಳ ತುಲನೆಯಲ್ಲಿ ಪ್ರೌಢಶಾಲಾ ಹಂತದಲ್ಲಿ ಶಾಲೆ ತೊರೆಯುವ ಬಾಲಕರ ಸಂಖ್ಯೆ ಕರ್ನಾಟಕದಲ್ಲಿ ಹೆಚ್ಚಾಗಿದೆ. ಒಂಬತ್ತು ಹಾಗೂ ಹತ್ತನೇ ತರಗತಿ ಬಾಲಕರು ಶಾಲೆ ಬಿಡುತ್ತಿದ್ದು ಶಿಕ್ಷಣದಲ್ಲಿ ಅತಿ ಹೆಚ್ಚು ಡ್ರಾಪ್‌ಔಟ್ ದರ ಹೊಂದಿರುವ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯಲ್ಲಿ ರಾಜ್ಯವು ಅತ್ಯಧಿಕ ಸ್ಥಾನದಲ್ಲಿದೆ. ದತ್ತಾಂಶದ ಪ್ರಕಾರ, 2025-2026 ಶೈಕ್ಷಣಿಕ ವರ್ಷದಲ್ಲಿ ಮಾಧ್ಯಮಿಕ ಹಂತದಲ್ಲಿ ಶೇ. 18.1 ರಷ್ಟು ಬಾಲಕ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿದಿದ್ದಾರೆ.

ಕೇಂದ್ರ ಶಿಕ್ಷಣ ಸಚಿವಾಲಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಬಿಡುಗಡೆ ಮಾಡಿದ ರಾಷ್ಟ್ರೀಯ ಶಿಕ್ಷಣ ಕಾರ್ಯಕ್ರಮ ಕಂಪ್ಲೆಂಟ್ ಶಾಲೆಗಳಿಗಾಗಿ ಇತ್ತೀಚೆಗೆ ಬಿಡುಗಡೆಯಾದ ಏಕೀಕೃತ ಜಿಲ್ಲಾ ಮಾಹಿತಿ ವ್ಯವಸ್ಥೆ ಶಿಕ್ಷಣ ಪ್ಲಸ್ ವರದಿಯಲ್ಲಿ ಈ ಮಾಹಿತಿ ಸಿಕ್ಕಿದೆ. ರಾಜ್ಯದಲ್ಲಿ ಈ ಪ್ರಮಾಣ ವರ್ಷದಿಂದ ವರ್ಷಕ್ಕೆ ಕೊಂಚ ಸುಧಾರಿಸುತ್ತಿದೆಯಾದರೂ, ಇತರೆ ರಾಜ್ಯಗಳಿಗೆ ಹೋಲಿಸಿದರೆ ಮಂದಗತಿಯಲ್ಲೇ ಮುಂದುವರಿದಿದೆ.

ಬೆಂಗಳೂರಿನ ಖಾಲಿ ನಿವೇಶನಗಳ ಮಾಲೀಕರಿಗೆ ಶಾಕ್

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರನ್ನು ಸ್ವಚ್ಛನಗರಿ ಮಾಡೋದಕ್ಕಾಗಿ ಆಗಸ್ಟ್-2026 ಮಾಹೆಯಲ್ಲಿ ತ್ಯಾಜ್ಯದಿಂದ ಸ್ವಾತಂತ್ರ'' ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಡಳಿತ ಹೊಂದಿರುವ ಎಲ್ಲಾ ನಗರ ಪಾಲಿಕೆಗಳು ಹಾಗೂ ಇತ ಸಂಸ್ಥೆಗಳ ವತಿಯಿಂದ ನಗರದ ರಸ್ತೆಗಳಲ್ಲಿ ಕಪ್ಪುಚುಕ್ಕೆಗಳು, ಕಟ್ಟಡ ಮತ್ತು ಭಗ್ನಾವಶೇಷ ತ್ಯಾಜ್ಯ ಮರದ ಕೊಂಬೆಗಳು, ವಿದ್ಯುತ್ ಕಂಬಗಳು, ಪೈಪುಗಳನ್ನು ಸಾಮೂಹಿಕವಾಗಿ ತೆರವುಗೊಳಿಸಲು ಉದ್ದೇಶಿಸಲಾಗಿದೆ. ಇದೇ ರೀತಿ ಬೆಂಗಳೂರಿನಲ್ಲಿರುವ ಖಾಲಿ ಸೈಟ್‌ಗಳನ್ನು ಶುಚಿಯಾಗಿ ಇಟ್ಟುಕೊಳ್ಳಿ ಎಂದು ಮಾಲೀಕರಿಗೆ ಸೂಚನೆ ನೀಡಲಾಗಿದೆ.

ಘನತ್ಯಾಜ್ಯ ನಿರ್ವಹಣಾ ಉಪವಿಧಿಗಳು-2020ರ ಉಪವಿಧಿ 18(1)(ಬಿ) ರನ್ವಯ ಖಾಲಿ ನಿವೇಶನಗಳನ ಸ್ವಚ್ಛ ಹಾಗೂ ನೈರ್ಮಲ್ಯಯುತ ಸ್ಥಿತಿಯಲ್ಲಿ ನಿರ್ವಹಿಸುವುದು ಮಾಲೀಕರ ಕಡ್ಡಾಯ ಜವಾಬ್ದಾರಿಯಾಗಿದೆ. ಖಾಲಿ ಸೈಟ್‌ನಲ್ಲಿ ಇರುವ ಕಸವನ್ನು ಆಗಸ್ಟ್ 15ರೊಳಗೆ ಕ್ಲೀನ್ ಮಾಡಲೇಬೇಕು.

ತಮಿಳುನಾಡಿಗೆ 3,500 ಕ್ಯೂಸೆಕ್ ನೀರು ಹರಿಸಲು ಆದೇಶ

ರಾಜ್ಯಾದ್ಯಂತ ಕನ್ನಡಪರ ಸಂಘಟನೆಗಳಿಂದ ತೀವ್ರ ಗೊಂಡ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಮುಂದಿನ ಹದಿನೈದು ದಿನಗಳ ಕಾಲ ತಮಿಳುನಾಡಿಗೆ ನಿತ್ಯ 3,500 ಕ್ಯೂಸೆಕ್ ನೀರು ಹರಿಸುವಂತೆ ಕಾವೇರಿ ನೀರು ನಿಯಂತ್ರಣ ಸಮಿತಿ ಆದೇಶ ನೀಡಿರುವುದನ್ನು ಖಂಡಿಸಿ ರಾಜ್ಯಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಕಾವೇರಿ ನೀರು ಬಿಡುಗಡೆ ನಿರ್ಧಾರವನ್ನು ವಿರೋಧಿಸಿ ವಿವಿಧ ಕನ್ನಡಪರ ಸಂಘಟನೆಗಳು, ರೈತ ಸಂಘಟನೆಗಳು ಬೀದಿಗಿಳಿದಿದ್ದು, ಮಂಡ್ಯ, ಮೈಸೂರಿನ ಕಾವೇರಿ ಕೊಳ್ಳದ ಪ್ರದೇಶಗಳು ಸೇರಿದಂತೆ ರಾಜ್ಯದೆಲ್ಲೆಡೆ ಪ್ರತಿಭಟನೆ ಕಾವು ಪಡೆದುಕೊಂಡಿದೆ. ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಇಂದು ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ವತಿಯಿಂದ ಬೃಹತ್ ಪ್ರತಿಭಟನಾ ಸಮಾವೇಶ ನಡೆಯಿತು. ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ನೂರಾರು ಕಾರ್ಯಕರ್ತರು, ಕಾವೇರಿ ನೀರು ನಿಯಂತ್ರಣ ಸಮಿತಿಯ ಆದೇಶ ಹಾಗೂ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಕರವೇ ನಾರಾಯಣಗೌಡ ಅವರು, ಕಾವೇರಿ ನೀರು ನಿಯಂತ್ರಣ ಸಮಿತಿಯ ಈ ತೀರ್ಪನ್ನು ರಾಜ್ಯ ಸರ್ಕಾರ ಯಾವುದೇ ಕಾರಣಕ್ಕೂ ಒಪ್ಪಬಾರದು ಎಂದು ಎಚ್ಚರಿಸಿದರು. ತಮಿಳುನಾಡಿಗೆ ನಿತ್ಯ 3,500 ಕ್ಯೂಸೆಕ್ ನೀರು ಬಿಡಲು ನಮ್ಮಿಂದ ಸಾಧ್ಯವೇ ಇಲ್ಲ ಎಂದ ಅವರು, ಪ್ರಸ್ತುತ ನಮ್ಮ ಕಾವೇರಿ ಜಲಾಶಯಗಳಲ್ಲಿ ಇರುವುದೇ ಕೇವಲ 12 ಟಿಎಂಸಿ ನೀರು. ಇದರಲ್ಲಿ ಬೆಂಗಳೂರು ನಗರದ ಕುಡಿಯುವ ನೀರಿನ ಅಗತ್ಯಕ್ಕಾಗಿಯೇ ತಿಂಗಳಿಗೆ 3 ಟಿಎಂಸಿ ನೀರು ಬೇಕಾಗುತ್ತದೆ. ಹೀಗಿರುವಾಗ ತಮಿಳುನಾಡಿಗೆ ನೀರು ಹರಿಸಿದರೆ ಕನ್ನಡಿಗರಿಗೆ ಕುಡಿಯುವ ನೀರಿಗೂ ತೊಂದರೆಯಾಗುತ್ತದೆ ಎಂದು ಎಚ್ಚರಿಸಿದರು.

ತಮಿಳುನಾಡಿನ ರಾಜಕೀಯ ನಾಯಕರು ಕೇಂದ್ರ ಮಟ್ಟದಲ್ಲಿ ಸತತ ಲಾಬಿ ಮಾಡುತ್ತಿದ್ದು, ರಾಜ್ಯ ಸರ್ಕಾರ ತಕ್ಷಣವೇ ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಬೇಕು ಎಂದು ನಾರಾಯಣಗೌಡ ಆಗ್ರಹಿಸಿದರು. ನಮ್ಮ ಜಲಾಶಯಗಳಲ್ಲಿ ಮಳೆಯಾಗದೇ ನೀರಿಲ್ಲದಿರುವ ನೈಜ ಸ್ಥಿತಿಯನ್ನು ವಕೀಲರ ಮೂಲಕ ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು ಕರ್ನಾಟಕದ ರೈತರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದರು. ಕಾವೇರಿ ಎನ್ನುವುದು ಕನ್ನಡಿಗರ ಭಾವನೆಯ ವಿಷಯವಾಗಿದ್ದು, ಇದರ ಜೊತೆ ಚೆಲ್ಲಾಟವಾಡಬಾರದು ಎಂದ ಅವರು, ಹಿಂದೆ ಮಾಜಿ ಸಿಎಂ ಬಂಗಾರಪ್ಪನವರು ಆದೇಶವನ್ನು ಹೇಗೆ ತಿರಸ್ಕರಿಸಿದ್ದರೋ, ಅದೇ ರೀತಿ ಅವರ ಶಿಷ್ಯ ಎಂದು ಹೇಳಿಕೊಳ್ಳುವ ಸಿಎಂ ಡಿ.ಕೆ. ಶಿವಕುಮಾರ್ ಅವರು ಕೂಡ ಈ ಆದೇಶವನ್ನು ಧಿಕ್ಕರಿಸಿ ನೀರು ಬಿಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಬೇಕು ಎಂದರು. ಇದೇ ವೇಳೆ, ಕಾವೇರಿ ವಿಚಾರದಲ್ಲಿ ಕಾನೂನು ಹೋರಾಟದಲ್ಲಿ

ಉದಯವಾಹಿನಿ ಚಿತ್ರ

ನಮಗೆ ಹಿನ್ನಡೆಯಾಗುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದ ಅವರು, ಇನ್ನು ಮುಂದೆ ನಮ್ಮ ವಕೀಲರು ಸರಿ

ಕೃಷಿಯಲ್ಲಿ ಜೈವಿಕ ಪೋಷಕಾಂಶಗಳ ಬಳಕೆಗೆ ಸಲಹೆ

• ಉದಯವಾಹಿನಿ, ಗುಬ್ಬಿ

ಮಣ್ಣಿನ ಆರೋಗ್ಯ ರಕ್ಷಣೆ, ಪೋಷಕಾಂಶಗಳ ನಿರ್ವಹಣೆ, ಸುಸ್ಥಿರ ಕೃಷಿ ಪದ್ಧತಿಗಳು ಹಾಗೂ ಬೆಳೆಗಳಲ್ಲಿ ಜೈವಿಕ ಪೋಷಕಾಂಶಗಳ ಸಮರ್ಪಕ ಬಳಕೆ ಮಾಡುವುದರಿಂದ ಬೆಳೆಯಲ್ಲಿ ಇಳುವರಿಯನ್ನು ಹೆಚ್ಚಿಸಿಕೊಳ್ಳಬಹುದು ಎಂದು ಅಮೃತ್ ಸಂಸ್ಥೆಯ ಕೃಷಿ ತಜ್ಞ ಪ್ರಭಾಕರ್ ಹೇಳಿದರು. ತಾಲ್ಲೂಕಿನ ಕಡಬ ಹೊಬಳಿ ಟಿ.ಹೊಸಹಟ್ಟಿ ಗ್ರಾಮದಲ್ಲಿ ಅಮೃತ್ ಆರ್ಗ್ಯಾನಿಕ್ ಫರ್ಟಿಲೈಜರ್ಸ್ ಮಲ್ಲಾಡಿಹಳ್ಳಿ ಹಾಗೂ ನಿಟ್ಟೂರು ರೈತ ಉತ್ಪಾದಕರ ಕಂಪನಿ ನಿಟ್ಟೂರು ವತಿಯಿಂದ ಏರ್ಪಡಿಸಿದ್ದ ರೈತರಿಗೆ ತಾಂತ್ರಿಕ ಮಾಹಿತಿ ಜಾಗೃತ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಮಣ್ಣಿನ ಆರೋಗ್ಯದ ಪ್ರಾಮುಖ್ಯತೆಯನ್ನು ತಿಳಿದು, ಸಾವಯವ ಗೊಬ್ಬರವನ್ನು ಮಣ್ಣಿಗೆ ಸೇರಿಸಬೇಕು. ಆಗ ನಾವು ಹೆಚ್ಚಿಗೆ ಇಳುವರಿ ಪಡೆಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಸಂಸ್ಥೆಯ ಪ್ರಮುಖ ಪ್ರತಿನಿಧಿ ಎಲ್. ಮುರಳಿಧರ್ ಮಾತನಾಡಿ, ಅಮೃತ್ ಆರ್ಗ್ಯಾನಿಕ್ ಫರ್ಟಿಲೈಜರ್ಸ್ ಸಂಸ್ಥೆಯು ಜೈವಿಕ ಗೊಬ್ಬರಗಳು, ಸಾವಯವ ಪೋಷಕಾಂಶಗಳು ಹಾಗೂ ಸಸ್ಯ ಪ್ರವರ್ಧಕ ಉತ್ಪನ್ನಗಳ ಮಾರಾಟ ಮಾಡಲಾಗುತ್ತದೆ. ಇವುಗಳನ್ನು ಬಳಸುವುದರಿಂದ ಮಣ್ಣಿನ ಹಾಗೂ ಮನುಷ್ಯನ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು.

ದ್ರಾಕ್ಷಿ ತೋಟ ವೀಕ್ಷಣೆ ನೆಪದಲ್ಲಿ ಅಕ್ರಮ ರೆಸಾರ್ಟ್ ಪ್ರಚಾರ: ಕ್ರಮಕ್ಕೆ ಕರವೇ ಆಗ್ರಹ

• ಉದಯವಾಹಿನಿ, ಗುಂಡ್ಲುಪೇಟೆ

ಉದಯವಾಹಿನಿ ಚಿತ್ರ

ತಾಲ್ಲೂಕಿನ ಗಡಿಭಾಗದ ಕನ್ನೇಗಾಲ ಟೋಲ್ ಪ್ಲಾಜಾ ಸಮೀಪ ದ್ರಾಕ್ಷಿ ತೋಟ ವೀಕ್ಷಣೆ ನೆಪದಲ್ಲಿ ಅಕ್ರಮವಾಗಿ ರೆಸಾರ್ಟ್ ಪ್ರಚಾರ ನಡೆಸಲಾಗುತ್ತಿದ್ದು, ಇದರಿಂದ ರಾಷ್ಟ್ರೀಯ ಹೆದ್ದಾರಿ766ರಲ್ಲಿ ಸಂಚಾರ ದಟ್ಟಣೆ ಹಾಗೂ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಮೈಸೂರು – ಚಾಮರಾಜನಗರ ಜಿಲ್ಲಾಧ್ಯಕ್ಷ ಆರ್. ಮೋಹನ್ ಆರೋಪಿಸಿದ್ದಾರೆ.

ದ್ರಾಕ್ಷಿ ತೋಟ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರು ರಸ್ತೆ ಬದಿಯಲ್ಲೇ ವಾಹನಗಳನ್ನ ಅಡ್ಡಾದಿಡ್ಡಿಯಾಗಿ ನಿಲ್ಲಿಸುತ್ತಿರುವುದರಿಂದ ಸ್ಥಳೀಯರು ತಮ್ಮ ಜಮೀನುಗಳಿಗೆ ತೆರಳಲು, ಜಾನುವಾರುಗಳು ಹಾಗೂ ಕೃಷಿ ಉಪಕರಣಗಳನ್ನ ಸಾಗಿಸಲು ತೊಂದರೆ ಉಂಟಾಗುತ್ತಿದೆ ಎಂದು ದೂರಿದ್ದಾರೆ. ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಪರವಾನಗಿ ಪಡೆಯದೆ ವಾಣಿಜ್ಯ ಉದ್ದೇಶಕ್ಕಾಗಿ ರೆಸಾರ್ಟ್ ನಿರ್ಮಿಸಿ, ದ್ರಾಕ್ಷಿ ತೋಟ ವೀಕ್ಷಣೆ ಹೆಸರಿನಲ್ಲಿ ಟಿಕೆಟ್ ಮಾರಾಟ ಮಾಡಿ ಅನ್ಯ ರಾಜ್ಯದ ಪ್ರವಾಸಿಗರನ್ನ ಸೆಳೆಯುವ ಮೂಲಕ ರೆಸಾರ್ಟ್ ಪ್ರಚಾರ ಮಾಡಲಾಗುತ್ತಿದೆ ಎಂದು ಆರೋಪಿಸಲಾಗಿದೆ.

ಈ ಕುರಿತು ಈ ಹಿಂದೆಯೇ ತಹಶೀಲ್ದಾರ್ ಹಾಗೂ ಜಿಲ್ಲಾಧಿಕಾರಿಗೆ ಹಲವು ಬಾರಿ ದೂರು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ಅಧಿಕಾರಿಗಳ ನಿರ್ಲಕ್ಷ್ಯವನ್ನ ತೋರಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರೆಸಾರ್ಟ್ ಮುಂಭಾಗದ ಸರ್ಕಾರಿ ಕೆರೆ ಜಾಗವನ್ನೂ ಒತ್ತುವರಿ ಮಾಡಲಾಗಿದೆ ಎಂಬ ಆರೋಪ ಮಾಡಿರುವ ಅವರು, ಜಿಲ್ಲಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಅಕ್ರಮವಾಗಿ ನಿರ್ಮಾಣ ಮಾಡಿರುವ ಕಟ್ಟಡಗಳನ್ನ ತೆರವುಗೊಳಿಸಿ ಸರ್ಕಾರಿ ಜಾಗವನ್ನ ವಶಕ್ಕೆ ಪಡೆದು ನಿಯಮ ಉಲ್ಲಂಘಿಸಿರುವ ಭೂಮಾಲೀಕರ ವಿರುದ್ಧ ಪ್ರಕರಣ ದಾಖಲಿಸಬೇಕು ಹಾಗೂ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರಕ್ಕೆ ಅಡ್ಡಿಯಾಗುವ ಹಾಗೆ ವಾಹನ ನಿಲುಗಡೆಗೆ ಅವಕಾಶ ನೀಡಿರುವವರ ವಿರುದ್ಧವೂ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದ್ದಾರೆ.

ಕ್ರಮ ಕೈಗೊಳ್ಳದಿದ್ದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಬೃಹತ್ ಪ್ರತಿಭಟನೆ ಹಾಗೂ ರಸ್ತೆ ತಡೆ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ದೇಶದಲ್ಲಿ ಅರಾಜಕತೆ ವಾತಾವರಣ ನಿರ್ಮಾಣ: ಎಚ್.ವಿಶ್ವನಾಥ್ ಬೇಸರ

ಪರಿಸ್ಥಿತಿ ಹೀಗಿದ್ದರೂ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನಾಯಕರು ದೆಹಲಿ ಮಟ್ಟದಲ್ಲಿ ರಾಜಕೀಯ ಮಾಡುವುದರಲ್ಲೇ ನಿರತರಾಗಿದ್ದಾರೆ

• ಉದಯವಾಹಿನಿ, ಮೈಸೂರು

1 ಕೆಪಿಎಸ್‌ಸಿಯಲ್ಲಿ ವ್ಯಾಪಕ ಭ್ರಷ್ಟಾಚಾರ

2 ರಾಜ್ಯವನ್ನು ಬರಪೀಡಿತ ಎಂದು ಘೋಷಿಸಿ

3 ಶಿಕ್ಷಣ-ಆರೋಗ್ಯ ಕ್ಷೇತ್ರದಲ್ಲಿ ಅರಾಜಕತೆ

ಪ್ರಜಾಪ್ರಭುತ್ವವ್ಯವಸ್ಥೆಯಲ್ಲಿ ಯಾವುದೇ ಸರ್ಕಾರ ಅಕ್ಷರ ಮತ್ತು ಆರೋಗ್ಯ ಕ್ಷೇತ್ರಗಳಿಗೆ ಮೊದಲ ಆದ್ಯತೆ ನೀಡಬೇಕು. ಆದರೆ, ಪ್ರಸ್ತುತ ದೇಶ ಹಾಗೂ ರಾಜ್ಯದಲ್ಲಿ ಈ ಎರಡೂ ರಂಗಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದ್ದು, ಅರಾಜಕತೆಯ ವಾತಾವರಣ ನಿರ್ಮಾಣವಾಗಿದೆ ಎಂದು ವಿಧಾನ ಪರಿಷತ್ತಿನ ಮಾಜಿ ಸದಸ್ಯ ಎಚ್.ವಿಶ್ವನಾಥ್ ಸರ್ಕಾರ ಹಾಗೂ ಜನಪ್ರತಿನಿಧಿಗಳ ವಿರುದ್ಧ ಬೇಸರ ವ್ಯಕ್ತಪಡಿಸಿದರು.

ನಗರದ ಜಲದರ್ಶಿನಿ ಅತಿಥಿಗೃಹದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಆಡಳಿತ ವೈಫಲ್ಯ, ಶಿಕ್ಷಣ-ಆರೋಗ್ಯ ಕ್ಷೇತ್ರದ ದುಸ್ಥಿತಿ, ಕೆಪಿಎಸ್‌ಸಿ ಭ್ರಷ್ಟಾಚಾರ ಹಾಗೂ ಭೀಕರ ಬರಗಾಲದ ಕುರಿತು ಸರ್ಕಾರದ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ರಾಜಕಾರಣಿಗಳೇ ಮುಂಚೂಣಿಯಲ್ಲಿದ್ದು ಸರ್ಕಾರಿ ಶಾಲೆ, ಕಾಲೇಜು ಮತ್ತು ಆಸ್ಪತ್ರೆಗಳನ್ನು ಮುಚ್ಚಿಸುತ್ತಿದ್ದಾರೆ. ಮಠ-ಮಾನ್ಯಗಳು ನಿರ್ಮಿಸಿರುವ ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಬಡವರಿಗೆ ಉಚಿತ ಸೀಟುಗಳು ಸಿಗುತ್ತಿಲ್ಲ. ನೀಟ್ ಅಕ್ರಮದ ವಿರುದ್ಧ ನಡೆದ ಮಾದರಿಯಲ್ಲೇ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ಸುಧಾರಣೆಗಾಗಿ ದೊಡ್ಡ ಮಟ್ಟದ ಸಂಘಟನಾತ್ಮಕ ಚಳವಳಿ ನಡೆಯಬೇಕಿದೆ ಎಂದು ಕರೆ ನೀಡಿದರು.

ರಾಜ್ಯದಲ್ಲಿ ಭೀಕರ ಬರಗಾಲ ಆವರಿಸಿದ್ದು, ಜನ ಸಾಮಾನ್ಯರು ಹಾಗೂ ರೈತರು ಕಂಗಾಲಾಗಿದ್ದಾರೆ. ಪರಿಸ್ಥಿತಿ ಹೀಗಿದ್ದರೂ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ನಾಯಕರು ದೆಹಲಿ ಮಟ್ಟದಲ್ಲಿ ರಾಜಕೀಯ ಮಾಡುವುದರಲ್ಲೇ ನಿರತರಾಗಿದ್ದಾರೆ. ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಮುಖ ಸಭೆಗಳು ನಡೆಯುತ್ತಿಲ್ಲ. ತಕ್ಷಣವೇ ರಾಜ್ಯವನ್ನು ಬರಪೀಡಿತ ಎಂದು ಘೋಷಿಸಿ ಪರಿಹಾರ ಕಾರ್ಯ ಆರಂಭಿಸಬೇಕು ಎಂದರು. ಸಿಎಂ ಸಿದ್ದರಾಮಯ್ಯ ಅವರನ್ನು ಭ್ರಷ್ಟಾಚಾರದ ನಾಯಕ ಎಂದು ಕಿಡಿ ಕಾರಿದ ವಿಶ್ವನಾಥ್, ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎನ್ನುವ ಸಿದ್ದರಾಮಯ್ಯನವರ ಹೇಳಿಕೆ ಕೇವಲ ಬ್ಲಾಕ್ ಮೇಲ್ ತಂತ್ರವಾಗಿದೆ. ಭವಿಷ್ಯದ ದೃಷ್ಟಿ ಇಟ್ಟುಕೊಂಡು ನಾನು ಚುನಾವಣೆಗೆ ನಿಲ್ಲಲ್ಲ ಎಂದು ಹೇಳುತ್ತಿದ್ದಾರೆ. ನಾನು ಚುನಾವಣೆಗೆ ನಿಲ್ಲಲ್ಲ ಎಂದರೆ ಕುರುಬರು ಯಾರು ಓಟ್ ಹಾಕಲ್ಲ ಎಂಬ ರೀತಿಯಲ್ಲಿ ಬಿಂಬಿಸಲು ಹೊರಟಿದ್ದಾರೆ. ಇದೇ ವೇಳೆ, ಈ ಬಾರಿಯ ಮೈಸೂರು ದಸರಾ ಮಹೋತ್ಸವದಲ್ಲಿ ಕಂಬಳ ಕ್ರೀಡೆಯನ್ನು ಆಯೋಜಿಸುವುದು ಬೇಡ ಎಂದು ಅಭಿಪ್ರಾಯಪಟ್ಟರು.

ಉದಯವಾಹಿನಿ ಚಿತ್ರ

ನಾನು ಇನ್ನುಂದೆ ಚುನಾವಣಾ ರಾಜಕೀಯದಿಂದ ದೂರ ಉಳಿಯಲಿದ್ದು, ಸಾರ್ವಜನಿಕ ಜೀವನದಲ್ಲಿ ಜನಪರ ಹೋರಾಟಗಾರನಾಗಿ ಮುಂದುವರಿಯುತ್ತೇನೆ. ಯಾವುದೇ ಚುನಾವಣೆಗಳಲ್ಲಿ ನಿಲ್ಲುವುದಿಲ್ಲ ಎಂದು ತಿಳಿಸಿದರು. -ಎಚ್.ವಿಶ್ವನಾಥ್

ತಹಸೀಲ್ದಾರ್ ಹಾಗೂ ಅಸಿಸ್ಟೆಂಟ್ ಕಮಿಷನರ್ ನಂತಹ ಉನ್ನತ ಹುದ್ದೆಗಳನ್ನು ಸೃಷ್ಟಿಸುವ ಕೆಪಿಎಸ್‌ಸಿ ನೇಮಕಾತಿ ಪ್ರಕ್ರಿಯೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದೆ. ಜಾತಿ ಆಧಾರಿತ ನೇಮಕಾತಿ ಪದ್ಧತಿಗೆ ತಕ್ಷಣ ತಿಲಾಂಜಲಿ ನೀಡಬೇಕು ಎಂದು ಆಗ್ರಹಿಸಿದರು. -ಎಚ್.ವಿಶ್ವನಾಥ್

ಯಾರಿಗೂ ಏನು ಮಾಡಲಿಲ್ಲ

ಈಗಾಗಲೆ ಕುರುಬರು ಸತ್ತು ಹೋಗಿದ್ದಾರೆ. ಸಿದ್ದರಾಮಯ್ಯನಿಗಾಗಿ ತನು ಮನ ಅರ್ಪಿಸಿದ ಕುರುಬರಿಗೆ ಏನೂ ಸಿಗಲಿಲ್ಲ, ಈಗಾಗಲೆ 1.20 ಕೋಟಿ ಕುರುಬರಿದ್ದಾರೆ. 10 ಲಕ್ಷ ಅಲೆಮಾರಿ ಕುರುಬರಿದ್ದಾರೆ. ಯಾರಿಗೂ ಏನು ಮಾಡಲಿಲ್ಲ ಎಂದು ಹರಿಹಾಯ್ದರು.

ಆತ್ಮ ಯೋಜನೆಯಡಿ ಅಣಬೆ ಬೇಸಾಯ ತರಬೇತಿ: ಹೆಚ್ಚುವರಿ ಆದಾಯಕ್ಕೆ ರೈತರಿಗೆ ಕೃಷಿ ಇಲಾಖೆ ಸಲಹೆ

• ಉದಯವಾಹಿನಿ, ಗುಂಡ್ಲುಪೇಟೆ

ಉದಯವಾಹಿನಿ ಚಿತ್ರ

2026-27ನೇ ಸಾಲಿನ ಆತ್ಮ ಯೋಜನೆಯಡಿ ರೈತರು ಹಾಗೂ ರೈತ ಮಹಿಳೆಯರಿಗೆ ಅಣಬೆ ಬೇಸಾಯ ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮವು ಪಟ್ಟಣದ ಅಂತಾರಾಷ್ಟ್ರೀಯ ಮಾನವ ಅಭಿವೃದ್ಧಿ ಮತ್ತು ಏಳಿಗೆ ಸಂಸ್ಥೆಯ ಸಭಾಂಗಣದಲ್ಲಿ ಬುಧವಾರ ನಡೆಯಿತು. ಕಾರ್ಯಕ್ರಮವನ್ನ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಶಶಿಧರ್ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಕೃಷಿ ಚಟುವಟಿಕೆಗಳ ಜೊತೆಗೆ ಹೆಚ್ಚುವರಿ ಆದಾಯ ಗಳಿಸಲು ಅಣಬೆ ಬೇಸಾಯ ಉತ್ತಮ ಪರ್ಯಾಯವಾಗಿದೆ ಎಂದು ತಿಳಿಸಿದರು. ಕಡಿಮೆ ವೆಚ್ಚದಲ್ಲಿ ಮನೆಯಲ್ಲೇ ಅಥವಾ ಅಲ್ಪ ಪ್ರಮಾಣದ ಜಮೀನಿನಲ್ಲಿ ಅಣಬೆ ಬೇಸಾಯ ಆರಂಭಿಸಬಹುದಾಗಿದ್ದು, ಮಾರುಕಟ್ಟೆಯಲ್ಲಿ ಇದಕ್ಕೆ ಉತ್ತಮ ಬೇಡಿಕೆ ಇದೆ. ಅಣಬೆ ಬೆಳೆಯ ವಿವಿಧ ವಿಧಾನಗಳಿದ್ದು, ಕೃಷಿ ಇಲಾಖೆಯ ವಿವಿಧ ಯೋಜನೆಗಳ ಮೂಲಕ ರೈತರಿಗೆ ತರಬೇತಿ ನೀಡಲಾಗುತ್ತಿದೆ. ರೈತರು ಈ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಕೃಷಿಯೊಂದಿಗೆ ಅಣಬೆ ಬೇಸಾಯವನ್ನೂ ಅಳವಡಿಸಿಕೊಂಡರೆ ಉತ್ತಮ ಆದಾಯ ಗಳಿಸಬಹುದು ಎಂದು ಸಲಹೆ ನೀಡಿದರು.

ಸಂಸ್ಥೆಯ ಸಂಯೋಜಕ ಕೇಶವಮೂರ್ತಿ ಮಾತನಾಡಿ, ಮಹಿಳೆಯರು ಸ್ವಾವಲಂಬಿಗಳಾಗಲು ಸರ್ಕಾರದ ವಿವಿಧ ಇಲಾಖೆಗಳ ಯೋಜನೆಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದರು. ಸ್ವಸಹಾಯ ಸಂಘಗಳು ಕೇವಲ ಸಾಲ ಸೌಲಭ್ಯ ಪಡೆಯುವುದಕ್ಕಷ್ಟೇ ಸೀಮಿತವಾಗದೆ, ಗುಂಪು ಹಾಗೂ ವೈಯಕ್ತಿಕ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಇಂತಹ ತರಬೇತಿಗಳು ಮಹಿಳೆಯರಲ್ಲಿ ಉದ್ಯಮಶೀಲತೆ ಬೆಳೆಸಲು ಸಹಕಾರಿಯಾಗಲಿದ್ದು, ಈ ಉದ್ದೇಶದಿಂದ ಸಂಸ್ಥೆಯು ಸ್ವಸಹಾಯ ಸಂಘಗಳ ಮೂಲಕ ವಿವಿಧ ಯೋಜನೆಗಳನ್ನ ರೂಪಿಸಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಪಾಪಣ್ಣ, ಸಿಬ್ಬಂದಿ ಹಾಗೂ ರೈತ ಮಹಿಳೆಯರು ಮತ್ತು ರೈತರು ಭಾಗವಹಿಸಿದ್ದರು.

ಮಲೆ ಮಹದೇಶ್ವರ ಬೆಟ್ಟ ಹುಂಡಿ ಹಣ ಎಣಿಕೆ

• ಉದಯವಾಹಿನಿ, ಹನೂರು

ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಹುಂಡಿ ಹಣ ಎಣಿಕೆ ಕಾರ್ಯ ನಡೆದಿದ್ದು 41 ದಿನಗಳಲ್ಲಿ ಸುಮಾರು 3 ಕೋಟಿ. 37 ಲಕ್ಷ, 06 ಸಾವಿರ ರೂಪಾಯಿ ಹುಂಡಿಯಲ್ಲಿ ಸಂಗ್ರಹವಾಗಿದೆ. ಪ್ರಾಧಿಕಾರದ ಹುಂಡಿ ಎಣಿಕೆ ಕಾರ್ಯವನ್ನು ಡಾ.ಶಾಂತ ಮಲ್ಲಿಕಾರ್ಜುನ ಸ್ವಾಮಿಗಳ ವರು ಪೀಠಾಧ್ಯಕ್ಷರು ಸಾಲೂರು ಬೃಹನ್ಮಠ ಇವರ ದಿವ್ಯ ಸಾನಿಧ್ಯ ದೊಂದಿಗೆ ಮಾನ್ಯ ಕಾರ್ಯದರ್ಶಿಗಳಾದ ಜಿ. ಪುರುಷೋತ್ತಮ ಇವರ ನೇತೃತ್ವದಲ್ಲಿ ಬೆಳಿಗ್ಗೆ 7-00 ಯಿಂದ ಎಣಿಕೆ ಕಾರ್ಯ ಪ್ರಾರಂಭಿಸಿ ಸಂಜೆಯ ವೇಳೆಗೆ ಮುಕ್ತಾಯವಾಯಿತು.

ದಿನಾಂಕ:- 17/06/2026 ರಿಂದ 27/07/2026ರ ವರೆಗಿನ 41 ದಿನಗಳಲ್ಲಿ ಸುಮಾರು ಒಟ್ಟು ಮೊತ್ತ ರೂ. 3,37,06,956/- ಗಳು ಸಂಗ್ರಹವಾಗಿದೆ ಹಾಗೂ ಚಿನ್ನ 58 ಗ್ರಾಂ, ಬೆಳ್ಳಿ ಒಂದು ಕೆಜಿ 250 ಗ್ರಾಂ ದೊರೆತಿರುತ್ತದೆ. ಜೊತೆಗೆ ವಿದೇಶಿ ನೋಟುಗಳು 10, ಚಲಾವಣೆಯಾಗದ 2000 ರೂ ಮುಖಬೆಲೆಯ ನಾಲ್ಕು ನೋಟುಗಳು ಹುಂಡಿಯಲ್ಲಿ ದೊರೆತಿದೆ. ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯರು ಮಹಾದೇವಪ್ಪ ಕೀಳನಪುರ, ಜಿಲ್ಲಾ ಕಚೇರಿಯ ವಿಷಯನಿರ್ವಾಹಕರು ಆರ್.ಭಾರತಿ, ಬ್ಯಾಂಕ್ ಆಫ್ ಬರೋಡ ಕೊಳ್ಳೇಗಾಲ ಶಾಖೆಯ ವ್ಯವಸ್ಥಾಪಕರು ಮತ್ತು ಸಿಬ್ಬಂದಿ, ಹಾಗೂ ಪ್ರಾಧಿಕಾರದ ಎಲ್ಲಾ ವಿಭಾಗಗಳ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಶಾಲಾ-ಕಾಲೇಜುಗಳಲ್ಲಿ ಮಾದಕ ವಸ್ತು ವಿರೋಧಿ ಜಾಗೃತಿ ಕಡ್ಡಾಯ: ಎಸ್.ಪಿ. ಮಲ್ಲಿಕ್

• ಉದಯವಾಹಿನಿ, ಮೈಸೂರು

ಉದಯವಾಹಿನಿ ಚಿತ್ರ

ಶಾಲಾ-ಕಾಲೇಜುಗಳಲ್ಲಿ ವಾರಕ್ಕೊಮ್ಮೆ ಮಾದಕ ವಸ್ತು ವಿರೋಧಿ ಜಾಗೃತಿ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಆಯೋಜಿಸಿ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ. ಮಲ್ಲಿಕ್ ಅವರು ತಿಳಿಸಿದರು. ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ನಡೆದ ನಾರ್ಕೋ ಸಮನ್ವಯ ಕೇಂದ್ರದ ಜಿಲ್ಲಾ ಮಟ್ಟದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಬಗ್ಗೆ ಅರಿವು ಮೂಡಿಸಿ ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ಅಭಿವೃದ್ಧಿಪಡಿಸಿರುವ ಟೋಲ್-ಫ್ರೀ ಸಂಖ್ಯೆ 1933 ಮತ್ತು ಇಮೇಲ್ ಟಿ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು. ಮಾದಕ ವಸ್ತುಗಳ ಮಾರಾಟ ಅಥವಾ ಕಳ್ಳಸಾಗಾಣಿಕೆ ಬಗ್ಗೆ ಮಾಹಿತಿ ಸಿಕ್ಕಲ್ಲಿ ತಕ್ಷಣ ಈ ಪೊರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವಂತೆ ಸೂಚಿಸಿದರು. ಕಾಲೇಜು ಮತ್ತು ಪ್ರೌಢಶಾಲೆ ಆವರಣ ಹಾಗೂ ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಿ ವಿದ್ಯಾರ್ಥಿಗಳ ಚಲನವಲನದ ಮೇಲೆ ನಿಗಾವಹಿಸಬೇಕು. ಸಾಮಾಜಿಕ ಜಾಲತಾಣ ಮತ್ತು ಜಾಗೃತಿ ಫಲಕಗಳ ಮೂಲಕ ಡ್ರಗ್ಸ್‌ನ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ: ವಿದ್ಯಾರ್ಥಿ-ವಿದ್ಯಾರ್ಥಿನಿಯರ ಹಾಸ್ಟೆಲ್ ಸುತ್ತಮುತ್ತ ಸಿಸಿಟಿವಿ ಅಳವಡಿಸಬೇಕು.

ಅನುಮಾನ ಬಂದಲ್ಲಿ ತಕ್ಷಣ ಪೊಲೀಸರಿಗೆ ಮಾಹಿತಿ ನೀಡಬೇಕು.

ಆರೋಗ್ಯ ಮತ್ತು ಔಷಧ ಇಲಾಖೆ: ನಗರ ಮತ್ತು ಜಿಲ್ಲೆಯ ಮೆಡಿಕಲ್ ಸ್ಟೋರ್ ಹಾಗೂ ಫಾರ್ಮಸಿಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಪರಿಶೀಲಿಸಬೇಕು. ನಿಷೇಧಿತ ಮಾತ್ರೆಗಳ ಮಾರಾಟ ಕಂಡುಬಂದರೆ ಪೊಲೀಸ್ ಇಲಾಖೆಯೊಂದಿಗೆ ದಾಳಿ ನಡೆಸಬೇಕು.

ಜಿಲ್ಲೆಯ ಕಾಡಂಚಿನ ಗ್ರಾಮಗಳು, ಹಾಡಿಗಳು ಮತ್ತು ಜಮೀನುಗಳಲ್ಲಿ ಅಕ್ರಮ ಗಾಂಜಾ ಬೆಳೆಯನ್ನು ಪತ್ತೆಹಚ್ಚಲು ಕ್ರಮ ಕೈಗೊಳ್ಳಬೇಕು. ಸರಕು ಸಾಗಣೆ ವಾಹನಗಳನ್ನು ತಪಾಸಣೆ ಮಾಡುವಾಗ ಮಾದಕ ವಸ್ತುಗಳ ಸಾಗಣೆ ಆಗುತ್ತಿದೆಯೇ ಎಂದು ಪರಿಶೀಲಿಸಿ, ಅನುಮಾನವಿದ್ದರೆ ಪೊಲೀಸರಿಗೆ ವರದಿ ಮಾಡಬೇಕು.

ಕುಸಿಯುತ್ತಿರುವ ಸೇತುವೆ ಎಚ್ಚತ್ತಕೊಳ್ಳದಿದ್ದರೆ ಆಪಾಯ ಕಟ್ಟಿಟ್ಟಬುತ್ತಿ

• ಉದಯವಾಹಿನಿ, ಬಂಗಾರಪೇಟೆ

ಉದಯವಾಹಿನಿ ಚಿತ್ರ

ಪಟ್ಟಣದ ಕುಪ್ಪಸ್ವಾಮಿ ಮೂದಲಿಯಾರ್ ಬಡಾವಣೆಯ

ಅಂತರಾಳದಿಂದ... EDITORIAL

ಅಕ್ರಮ ಮರಳುಗಾರಿಕೆಗೆ ಕಡಿವಾಣ ಕೃತಕ ಅಭಾವ ಸೃಷ್ಟಿಯಾಗದಿರಲಿ



ರಾಜ್ಯದಲ್ಲಿವ್ಯಾಪಕವಾಗಿ ನಡೆಯುತ್ತಿರುವ ಅಕ್ರಮ ಮರಳುಗಾರಿಕೆ ದಂಧೆಗೆ ಕಡಿವಾಣ ಹಾಕಲು ಪೊಲೀಸ್ ಇಲಾಖೆ ಇನ್ನಷ್ಟು ಬಿಗಿ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಿದೆ. ಈ ಸಂಬಂಧ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಹೊಸದಾಗಿ ಹೊರಡಿಸಿರುವ ಸುತ್ತೋಲೆಯಲ್ಲಿ ದಂಧೆಕೋರರ ವಿರುದ್ಧ ಗೂಂಡಾ ಕಾಯ್ದೆಯಡಿ ಕಠಿನ ಕ್ರಮ, ಅಕ್ರಮವಾಗಿ ಮರಳು ಗಣಿಗಾರಿಕೆ, ಸಂಗ್ರಹ, ಸಾಗಾಟ ಹಾಗೂ ಮರಳುಗಾರಿಕೆ ನಡೆಯುವ ಸ್ಥಳಗಳ ಮೇಲೆ ನಿಗಾ ಇರಿಸುವುದರ ಜತೆಯಲ್ಲಿ ತಮ್ಮ ಹೊಣೆಗಾರಿಕೆಯನ್ನು ಸಮರ್ಪಕವಾಗಿ ನಿಭಾಯಿಸುವಲ್ಲಿ ವಿಫಲರಾದ ಪೊಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದೂ ಎಚ್ಚರಿಕೆ ನೀಡಲಾಗಿದೆ. ರಾಜ್ಯದಲ್ಲಿ ಕಳೆದ ಕೆಲವು ವರ್ಷಗಳಿಂದ ಅಕ್ರಮ ಮರಳುಗಾರಿಕೆ ದಂಧೆಯಾಗಿ ಮಾರ್ಪಟ್ಟಿದ್ದು, ಇದನ್ನು ಸಂಪೂರ್ಣವಾಗಿ ಮಟ್ಟ ಹಾಕುವ ದಿಸೆಯಲ್ಲಿ ಪೊಲೀಸ್ ಇಲಾಖೆಯ ಈ ನಿರ್ಧಾರ ಸಕಾಲಿಕವಾಗಿದೆ. ವಿವಿಧ ಜಲಮೂಲಗಳಿಂದ ಅದರಲ್ಲೂ ಹೊಳೆ, ನದಿಗಳಿಂದ ಹಗಲು-ರಾತ್ರಿ ಎನ್ನದೇ ಮರಳುಗಾರಿಕೆ ನಡೆಸಲಾಗುತ್ತಿರುವ ಪರಿಣಾಮ ಮರಳುಗಾರಿಕೆ ನಡೆಯುತ್ತಿರುವ ಕೆಲವು ಪ್ರದೇಶಗಳು ಸ್ಥಳೀಯರ ಪಾಲಿಗೆ ಯಮಕೂಪಗಳಾಗಿ ಪರಿಣಮಿಸಿವೆ. ಇನ್ನು ಬಹುತೇಕ ಕಡೆ ಮರಳುಗಾರಿಕೆಗೆ ಪರವಾನಿಗೆ ಪಡೆದ ಗುತ್ತಿಗೆದಾರರು ನಿರ್ದಿಷ್ಟ ವ್ಯಾಪ್ತಿಯನ್ನು ಮೀರಿ, ಅತ್ಯಾಧುನಿಕ ಯಂತ್ರೋಪಕರಣಗಳನ್ನು ಬಳಸಿ ಮರಳುಗಾರಿಕೆ ನಡೆಸುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಇದರಿಂದ ನದಿ, ಹೊಳೆಗಳ ಒಡಲೂ ಬರಿದಾಗುತ್ತಿದೆಯಲ್ಲದೆ ನೈಸರ್ಗಿಕ ಅಸಮತೋಲನಕ್ಕೆ ಕಾರಣವಾಗುತ್ತಿದೆ.

ಮತ್ತೊಂದೆಡೆ ಸರ್ಕಾರ ಜಾರಿಗೊಳಿಸಿದ ಬಿಗಿ ನಿಯಮಾವಳಿಗಳಿಂದಾಗಿ ಮರಳು ಬೆಲೆ ಗಗನಕ್ಕೇರಿದ್ದೇ ಅಲ್ಲದೆ ರಾಜ್ಯದ ವಿವಿಧೆಡೆ ಮರಳಿನ ಅಭಾವವೂ ಕಾಣಿಸಿಕೊಂಡಿತ್ತು. ಇದರಿಂದಾಗಿ ಬಡ, ಮಧ್ಯಮ ವರ್ಗದ ಕುಟುಂಬಗಳ ಸ್ವಂತ ಸೂರಿನ ಕನಸು ವರ್ಷಗಳು ಉರುಳಿದರೂ ನನಸಾಗದಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಅಕ್ರಮ ಮರಳು ದಂಧೆಕೋರರು ಜನರ ಸಂಕಷ್ಟವನ್ನೇ ಬಂಡವಾಳ ಮಾಡಿಕೊಂಡು ಸರ್ಕಾರದ ಮೇಲೆ ಒತ್ತಡ ಹೇರಿದ್ದರಿಂದ ನಿರ್ದಿಷ್ಟ ಪ್ರದೇಶಗಳಿಗೆ ಸೀಮಿತವಾಗಿ ನಿಯಮಾವಳಿಗಳಲ್ಲಿ ಒಂದಿಷ್ಟು ಸಡಿಲಿಕೆ ಮಾಡಲಾಗಿತ್ತು.

ಈ ಸಂಬಂಧ ಸ್ಥಳೀಯರು ಮತ್ತು ಪರಿಸರ ಪ್ರೇಮಿಗಳಿಂದ ತೀವ್ರ ವಿರೋಧ ವ್ಯಕ್ತವಾಗುತ್ತಲೇ ಬಂದಿದೆ. ಈ ಹಿನ್ನೆಲೆಯಲ್ಲಿ ಸರಕಾರ ವಿವಿಧ ತೆರನಾದ ನಿಯಮಾವಳಿ, ಮಾರ್ಗಸೂಚಿಗಳನ್ನು ಜಾರಿಗೊಳಿಸಿ ಆದೇಶ ಹೊರಡಿಸಿತ್ತು. ಇದರ ಹೊರತಾಗಿಯೂ ಗುತ್ತಿಗೆದಾರರು ಮತ್ತು ಇಲಾಖಾಧಿಕಾರಿಗಳ ಹೊಂದಾಣಿಕೆ, ವಶೀಲಿಬಾಜಿ ನಿಲುವುಗಳಿಂದ ಅಕ್ರಮ ಮರಳುಗಾರಿಕೆಗೆ ಕಡಿವಾಣ ಹಾಕಲು ಸಾಧ್ಯವಾಗಿರಲಿಲ್ಲ. ಇವೆಲ್ಲದರ ಹೊರತಾಗಿಯೂ ಅಕ್ರಮ ಮರಳುಗಾರಿಕೆ ದಂಧೆ ಮುಂದುವರಿದಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಆದೇಶ ಹೊರಡಿಸಿದೆ. ಸಂಬಂಧಿತ ಇಲಾಖೆ ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸುವ ಮೂಲಕ ರಾಜ್ಯದೆಲ್ಲೆಡೆ ಅದರಲ್ಲೂ ಗಡಿ ಮತ್ತು ಅಂತಾರಾಜ್ಯ ಮಾರ್ಗಗಳಲ್ಲಿ ಈ ಅಕ್ರಮ ಮರಳುಗಾರಿಕೆ, ಸಂಗ್ರಹ, ಸಾಗಾಟ ದಂಧೆಗೆ ಕಡಿವಾಣ ಹಾಕಬೇಕು ಎಂದು ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಸೂಚನೆ ನೀಡಿದ್ದು ಇನ್ನಾದರೂ ಈ ದಂಧೆಗೆ ಕಡಿವಾಣ ಬಿದ್ದೀತೇ ಎಂಬುದನ್ನು ಕಾದುನೋಡಬೇಕು. ಆದರೆ, ಈ ಕಟ್ಟುನಿಟ್ಟಿನ ಆದೇಶವನ್ನೇ ಮುಂದಿಟ್ಟು ಅಕ್ರಮ ಮರಳುಗಾರಿಕೆ ದಂಧೆಕೋರರು ಮತ್ತೆ ಕಟ್ಟಡ ನಿರ್ಮಾಣ ಕ್ಷೇತ್ರದ ಮೇಲೆ ಅದರಲ್ಲೂ ಸ್ವಂತ ಸೂರಿನ ಹೊಂಗನಸು ಕಂಡಿರುವ ಬಡ-ಮಧ್ಯಮ ವರ್ಗದವರ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳದಂತೆ ಹಾಗೂ ಮರಳಿನ ಕೃತಕ ಅಭಾವ ಸೃಷ್ಟಿಯಾಗದಂತೆ ಎಚ್ಚರಿಕೆ ವಹಿಸಬೇಕು. ಅಕ್ರಮ ದಂಧೆಗೆ ಕಡಿವಾಣ ಹಾಕುವ ಭರದಲ್ಲಿ ಕಟ್ಟಡ ನಿರ್ಮಾಣ ಕ್ಷೇತ್ರ ನಲುಗದಂತೆ ಎಚ್ಚರ ವಹಿಸಬೇಕಿರುವುದು ಕೂಡ ಸರ್ಕಾರದ ಜವಾಬ್ದಾರಿ.

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

''ವೇದಕ್ಕೂ ಮಿಗಿಲಾದ ಈ ಮಂತ್ರವನ್ನು ವಾರಣಾಸಿಯಲ್ಲಿ ಶಿವನು ಮೋದದಿಂದ ಜಗತುಗಳಿಗೂ ಉಪದೇಶಿಸುವ ಮಾರ್ಗವನ್ನು ತೆರಪಿಲ್ಲದೆ ತೋರಿಸುವನು; ಈ ಮಂತ್ರದ ಹಾದಿಯಲ್ಲಿ ಸಾಗದಿದ್ದರೆ ಯೋಗೀಂದ್ರರಿಗೆ ನಿರ್ವಾಣಪದವಿಯು ದೊರಕುವುದಿಲ್ಲ. ಆದ್ದರಿಂದ ಇದನ್ನು ಸರ್ವಾರ್ಥಸಾಧಕವೆಂದು ಸದಾ ಜಪಿಸುತ್ತಿರು. ಈ ರಾಜಮಂತ್ರದ ಮಹಿಮೆಯಿಂದಾಗಿ ಬ್ರಹ್ಮ ಇಂದ್ರ ಚಂದ್ರ ಮುಂತಾದವರು ಸೃಷ್ಟಿಕರ್ತೃತ್ವವೇ ಮುಂತಾದ ಸಾಮರ್ಥ್ಯವನ್ನು ಹೊಂದಿ ಸುಖದಲ್ಲಿದ್ದಾರೆ. ಈ ಮಂತ್ರವನ್ನು ಬ್ರಹ್ಮನು ತನ್ನ ಮಗನಿಗೆ ಬೋಧಿಸಿದ್ದರಿಂದ, ಕೌಶಿಕ ನಾರದ ಮುಂತಾದ ಮಹಾಮುನಿಗಳಿಗೆ ಅಖಿಲೇಷ್ಟಗಳೂ ಸಿದ್ಧಿಸಿದವು. ನನ್ನನ್ನು ಉಪಾಸಿಸುವವರು ದೇವಾಸುರರೂ ಮುನಿಗಳೂ ಸ್ತ್ರೀವೈಶ್ಯಪಾಪಕುಲದಲ್ಲಿ ಹುಟ್ಟಿದ ಸಮಸ್ತರೂ ಮತ್ತಿತರರೂ ಈ ಮಂತ್ರದಲ್ಲಿ ಭಕ್ತಿಯನ್ನಿಟ್ಟರೆ ಪರಮಪದವನ್ನು ಸೇರುತ್ತಾರೆ, ಇದರಲ್ಲಿ ಸಂದೇಹವಿಲ್ಲ, ಕಾಮಧೇನುವನ್ನು ಮನೆಯಲ್ಲಿ ಹೊಂದಿದ್ದು ಇತರ ಪ್ರಾಣಿಗಳ ಸೇವೆ ಮಾಡುವವರಿಗೆ ಈ ವಿದ್ಯೆಯು ಕೈಗೂಡುವುದಿಲ್ಲ, ಇಷ್ಟಾರ್ಥಗಳು ನೆರವೇರುವುದಿಲ್ಲ, ಚತುರ್ಮುಖಿ ಶಂಕರ ವಸಿಷ್ಠ ಕಾಶ್ಯಪ ಪರಾಶರ ಭರದ್ವಾಜ ಕೌಶಿಕ ಅಕ್ಷಪಾದ ವಾಲ್ಮೀಕಿ ವ್ಯಾಸ ಸುತೀಕ್ಷ್ಣ ಮುಂತಾದ ಮುನಿಗಳೆಲ್ಲರೂ. ಜಾಂಬವ ಸುಗ್ರೀವ ಜಟಾಯು ಶಬರಿ ಜಾನಕಿ ಸೌಮಿತ್ರಿ - ಈ ಎಲ್ಲರೂ ಅತಿಭಕ್ತಿಯಿಂದ ಕೂಡಿ ನನ್ನ ಭಾವಪೂಜೆಯನ್ನು ಮಾಡುವ ಮುಕ್ತರು ಎಂದು ತಿಳಿ. ಪಶು ಪಕ್ಷಿ ಕೀಟ ಮಾನವ ಮುಂತಾದವರೆಲ್ಲ ನನ್ನ ಭಕ್ತಿಗೆ ವಶವಾದರೆ ಮುಕ್ತಿಪಥದಲ್ಲಿ ಸಾಗುವುದು ಅಂಗೈ ನೆಲ್ಲಿಯಂತೆ ಸುಸ್ಪಷ್ಟವಾಗುತ್ತದೆ. ನನ್ನ ಭಕ್ತಿಯನ್ನು ಬಿಟ್ಟು ಬಗೆ ಬಗೆಯ ಕರ್ಮಗಳನ್ನು ಮಾಡಿದರೆ ಕೇವಲ ಬಸವಳಿವುದಲ್ಲದೆ ಅದರಿಂದ ಬಂಧ ಹೋಗುವುದು ಹುಸಿ; ಭವಬಂಧ ಮುಕ್ತಿಗೆ ನನ್ನ ಭಕ್ತಿಯೇ ಕಾರಣ. ಜಗದೀಶ ಸರ್ವಜ್ಞ ಕರುಣಾಸ್ಪದ' ಎನ್ನುತ್ತ ಬರಿ ಎಲೆಹೂಹಣ್ಣುನೀರುಗಳನ್ನಷ್ಟೇ ಭಕ್ತಿಯಿಂದ ಅರ್ಪಿಸಿದರೆ ಅದರಿಂದ ಅಗಣಿತ ಸಂತೃಪ್ತಿ ಹೊಂದಿ ಕೈವಲ್ಯವನ್ನು ನೀಡುವ ಸರ್ವಾತ್ಮನು ನಾನು ಎಂಬುದನ್ನು ಮೂಢರು ತಿಳಿಯರು. ಕಿಂಚಿತ್ತಾದರೂ ಕಷ್ಟಪಡದೆ ಭಕ್ತಿಯಿಂದ ನನ್ನ ಮೊರೆವೊಕ್ಕು ಜನನಾದಿಗಳನ್ನು ಕಳೆದುಕೊಳ್ಳಬಹುದೆಂಬುದನ್ನರಿಯದೆ, ಆಯಾಸಪಟ್ಟು ಯಾಗಯೋಗ ಮುಂತಾದ ಅನುಷ್ಠಾನಗಳ ಬಲೆಯಲ್ಲಿ ಸಿಲುಕಿದ ಪಾಮರರು ನರಳಿ ಕೊನೆಯಿಲ್ಲದ ಈ ಭವಸಾಗರದಲ್ಲಿ ಸದಾ ಮುಳುಗೇಳುತ್ತಿರುತ್ತಾರೆಯೇ ಎನಾ ಚಿತ್ತಶುದ್ಧಿಯಿಂದ ನನ್ನ ಪಾದಪದ್ಮಗಳಿಗೆ ಶರಣಾಗಿ ಆನಂದಮಯರಾಗುವ ಮಾರ್ಗವನ್ನು ಅರಿಯರು. ವೇದಗಳಂಬ ದಟ್ಟ ಕಾಡಿನಲ್ಲಿ ಸಿಕ್ಕಿಕೊಂಡು, ಬುದ್ಧಿಗೆ ಸಾಧ್ಯವಲ್ಲದ ಸ್ಮೃತಿಪುರಾಣಗಳಲ್ಲಿ ತೊಳಲಾಡಿ ಕಂಗಾಣದೆ ಹಲವಾರು ಮಾರ್ಗಗಳನ್ನು ಹಿಡಿದು ಧಾವತಿಯಿಂದ ಬಳಲುತ್ತಾರೆಯೇ ಹೊರತು ಈ ದುಷ್ಕರ್ಮಸಂತತಿಯಿಂದ ಏನೇನೂ ಪ್ರಯೋಜನವಿಲ್ಲ ಎಂಬುದನ್ನು ಅರ್ಥಮಾಡಿಕೊಂಡು ನನ್ನ ಮೊರೆವೊಕ್ಕರೆ ನಾನು ಅಂಥವರನ್ನು ಉದ್ಧರಿಸುವುದರಲ್ಲಿ ಸಂಶಯವೇ ಇಲ್ಲ. ಆದ್ದರಿಂದ ಬಾಲಕನೇ ನನ್ನನ್ನು ಮನಃಪೂರ್ವಕವಾಗಿ ಭಜಿಸಿ ನನ್ನ ಮಹಿಮೆಯನ್ನು ತಿಳಿಯುವ ಬಗೆಯನ್ನು ಹೇಳುತ್ತೇನೇನೆ

''ಸೃಷ್ಟಿ ಮಾಡುವಲ್ಲಿ ನಾನು ಬ್ರಹ್ಮ ಪಾಲಿಸುವುದರಲ್ಲಿ ವಿಷ್ಣು ಎನಾಶಗೈಯುವುದರಲ್ಲಿ ರುದ್ರ ವಿದ್ಯಾವಂತರ ವಿದ್ಯೆ, ಯೋಗಗಳಲ್ಲಿನ ಯೋಗರೂಪ, ಮನಸ್ಸಿನ ಚಾಂಚಲ್ಯ. ಜಗತ್ಪಾಲನೆಯಲ್ಲಿನ ದಯೆ, ಶತ್ರುಸಂಹಾರದಲ್ಲಿ ನಿರಹಂಕಾರ, ಜ್ಞಾನದಲ್ಲಿ ಸ್ವಸ್ವರೂಪೈಕಚಿತ್ರ; ಕತ್ತಲೆಯಲ್ಲಿನ ಅಂಧಕಾರ, ಭಕ್ತಸಮೂಹದಲ್ಲಿನ ಶಂಕರ ಭರತಲಕ್ಷ್ಮಣ ವಸಿಷ್ಠರೂ ನಾನೇ ಭಾರವನ್ನು ವಹಿಸುವುದರಲ್ಲಿ ಆಮೆ (ಕೂರ್ಮ), ಬೆಳಗಿಗೆ ಬೆಳಗು, ಬಂಧುಗಳಲ್ಲಿ ಗುರು, ಚಿತ್ತಶುದ್ಧಿಗೆ ಶುದ್ಧಿ, ಶಕ್ತಿಯ ಶಕ್ತಿ ನಾನು ವಿನಯಕ್ಕೆ ವಿನಯ, ಮರಗಳಲ್ಲಿ ಅಶ್ವತ್ಥ ನಾನು ಎಂದು ತಿಳಿ. ವಿದ್ಯೆಗಳಲ್ಲಿ ವೇದ, ಮತಿಗೆ ಮತಿ, ಭಕ್ತಿಗೆ ಭಕ್ತಿ, ಜಗದೇಕಕಾರಣನು ನಾನು ಆಶ್ರಮಗಳಲ್ಲಿ ಸನ್ಯಾಸ, ಭೀಕರಕ್ಕೆ ಭೀಕರ, ಕವಿಗಳಲ್ಲಿ ವಾಲ್ಮೀಕಿ ನಾನು; ಶ್ರೇಷ್ಟ ಪರ್ವತಗಳಲ್ಲಿ ಮೇರು, ವೃಕ್ಷಗಳಲ್ಲಿ ಆಲ, ಮಾರ್ಗಗಳಲ್ಲಿ ನಿವೃತ್ತಿಮಾರ್ಗ ನಾನು ಎಂದು ತಿಳಿ. ಮಣ್ಣಿನ ಕಣಗಳನ್ನಾದರೂ ಎಣಿಸಬಹುದು, ಆದರೆ ನನ್ನ ಮಹಿಮೆಗಳನ್ನು ಎಣಿಸಲಾಗದು ಒಂದರಲ್ಲಿ ಅನೇಕವಾಗಿ, ಅನೇಕಗಳಲ್ಲಿ ಒಂದಾಗಿ ನಾನಿರುತ್ತೇನೆ ಎಂದು ತಿಳಿದುಕೊಂಡು ಬಗೆಯಿಂದಲೂ ನನ್ನ ಚರಣಗಳಿಗೆ ಶರಣಾಗಬೇಕು.

ಆದರೆ ಭಕ್ತಿಯನ್ನು ಅನುಷ್ಠಾನಗೊಳಿಸುವ ಮುನ್ನ ಗುರುವಿನಿಂದ ನಿಖಿಲ ಶಾಸ್ತ್ರಗಳನ್ನು ಅರಿತುಕೊಳ್ಳಬೇಕು. ಹಾಗೆ ಗುರುವಿನಿಂದ ಲಬ್ಧವಾದ ಅರಿವನ್ನು ಮನಸ್ಸಿನಲ್ಲಿರಿಸಿಕೊಂಡು, ವಾಯುವನ್ನು ನಿಗ್ರಹಿಸಿ, ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಂಡು, ಬೇರಾವುದನ್ನೂ ಪರಿಗಣಿಸದೆ ನೇಮದಿಂದ ಪ್ರತಿನಿತ್ಯವೂ ಮನಸ್ಸಿನಲ್ಲಿಯೇ ಜಪಿಸುತ್ತಿದ್ದರೆ ಅಭ್ಯಾಸಬಲದಿಂದ ಗುರುದೇವತಾಭಕ್ತಿಯು ಹುಟ್ಟುತ್ತದೆ. ಅದರಿಂದ ಅಜ್ಞಾನವು ಹರಿಯುತ್ತದೆ, ಕತ್ತಲು ಹರಿದು ಚಿದಾದಿತ್ಯನ ಉದಯವಾತ್ತದೆ.

ಮುಂದುವರೆಯುವುದು

ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

37

ವಿಫಲತೆಯನ್ನು ಅಂತ್ಯವೆಂದು ಭಾವಿಸುವ ಬದಲು, ಅದನ್ನು ಮುಂದಿನ ಮೆಟ್ಟಿಲಾಗಿ ಕಾಣುವ ಮನೋಭಾವ ಇಲ್ಲಿಂದಲೇ ಹುಟ್ಟುತ್ತದೆ. ಇತರರ ಸಾಧನೆಗೆ ಹೋಲಿಸಿ ತನ್ನನ್ನು ಕುಗ್ಗಿಸಿಕೊಳ್ಳದೆ, ತನ್ನ ಪ್ರಯತ್ನದ ಮೇಲೆ ನಂಬಿಕೆ ಇಡುವ ಗುಣವೂ ಇದೇ ಸಮತೋಲನದಿಂದ ಬೆಳೆಯುತ್ತದೆ. ಹೀಗೆ ಬೆಳೆದ ಮನಸ್ಸಿನಲ್ಲಿ ತಾಳ್ಮೆ ಅರಳುತ್ತದೆ, ಧೈರ್ಯ ಬಲಗೊಳ್ಳುತ್ತದೆ, ಆತ್ಮವಿಶ್ವಾಸ ಬೇರು ಬಿಡುತ್ತದೆ.

ಶಾಂತ ಮನಸ್ಸೇ ದೊಡ್ಡ ಸಾಧನೆ

ಸಾಧನೆಯ ದಾರಿಯಲ್ಲಿ ಮೊದಲು ಸಜ್ಜಾಗಬೇಕಾದುದು ದೇಹವಲ್ಲ, ಮನಸ್ಸು. ಆ ಮನಸ್ಸನ್ನು ಸ್ಥಿರವಾಗಿಡುವ ಕಲೆಗೇ ಭಾವನಾತ್ಮಕ ಸಮತೋಲನ ಎಂಬ ಹೆಸರು. ವಿದ್ಯಾರ್ಥಿ ಜೀವನದಲ್ಲಿ ಪರೀಕ್ಷೆ, ಫಲಿತಾಂಶ, ಸ್ಪರ್ಧೆ ಮತ್ತು ನಿರೀಕ್ಷೆಗಳ ಅಲೆಗಳು ಒಂದರ ಮೇಲೊಂದರಂತೆ ಎರಗುತ್ತವೆ. ಅಂತಹ ಹೊತ್ತಿನಲ್ಲಿ ಕೋಪ, ಆತಂಕ ಅಥವಾ ಅತಿಯಾದ ಸಂತೋಷಕ್ಕೆ ಮಣಿದರೆ ಗುರಿ ದೂರವಾಗುತ್ತದೆ. ಆದರೆ ಏರಿಳಿತಗಳನ್ನು ಅರ್ಥಮಾಡಿಕೊಂಡು, ತಾಳ್ಮೆಯಿಂದ ನಿಂತು ಯೋಚಿಸುವ ಶಕ್ತಿಯೇ ನಿಜವಾದ ಗೆಲುವಿಗೆ ಬುನಾದಿ. ವಿಜ್ಞಾನವೂ ಇದನ್ನು ಒಪ್ಪುತ್ತದೆ.

ಭಾವನೆಗಳನ್ನು ಸರಿಯಾಗಿ ನಿಯಂತ್ರಿಸಿದಾಗ ಮೆದುಳಿನ ಒತ್ತಡ ಕಡಿಮೆಯಾಗಿ ಚಿಂತನೆ ಸ್ಪಷ್ಟವಾಗುತ್ತದೆ. ಹೃದಯ ಬಡಿತ ಸಮವಾಗುತ್ತದೆ. ಅಂತಹ ನೆಮ್ಮದಿಯ ಮನಸ್ಸಿನಲ್ಲಿ ಕಲಿಕೆ ಬೇಗ ಬೇರೂರುತ್ತದೆ ಮತ್ತು ನೆನಪು ಗಾಢವಾಗುತ್ತದೆ. ಗೊಂದಲದ ಮಂಜು ಕರಗಿ ಸ್ಪಷ್ಟತೆಯ ಬೆಳಕು ಮೂಡುತ್ತದೆ.

ಹೀಗಾಗಿ ಭಾವನಾತ್ಮಕ ಸಮತೋಲನವು ಗದ್ದಲ ಮಾಡುವುದಿಲ್ಲ. ಅದು ಮೌನವಾಗಿ ನಿಂತು ವಿದ್ಯಾರ್ಥಿಯನ್ನು ಸರಿಯಾದ ದಾರಿಯಲ್ಲಿ ನಡೆಸುತ್ತದೆ. ದೊಡ್ಡ ಸಾಧನೆಗಳ ಹಿಂದೆ ಕೇಳಿಸದ ಈ ನಿಶ್ಶಬ್ದ ಬಲವೇ ಇರುತ್ತದೆ. ಅದೇ ಯಶಸ್ಸಿನ ನಿಜವಾದ ಕೀಲಿ.

ನಿಮ್ಮ ಬಂದಿರುವ ಕೋಪ ನಿಯಂತ್ರಿಸಲು ಮಕ್ಕಳನ್ನು ಹೊಡೆಯುತ್ತೀರಾ? ತಿದ್ದುವ ಬುದ್ಧಿವಂತಿಕೆ ಟಿಪ್ಸ್ ಪಾಲಿಸಿ

ಕೆಲವು ಬಾರಿ ಮಕ್ಕಳು ತಪ್ಪಾಗಿ ವರ್ತಿಸಿದಾಗ, ಏನನ್ನಾದರೂ ಮುರಿದಾಗ ಇಲ್ಲವೇ ಹಾನಿ ಉಂಟುಮಾಡಿದಾಗ ಕೋಪಗೊಳ್ಳುವುದು ಸಹಜ. ತಪ್ಪು ಗಂಭೀರವಾಗಿದ್ದರೆ ನಾವು ಆಗಾಗ್ಗೆ ಗದರಿಸುವುದನ್ನು ಮೀರಿ ಅವರನ್ನು ಹೊಡೆಯುತ್ತೇವೆ. ಮಕ್ಕಳ ನಡವಳಿಕೆಯು ಈ ರೀತಿ ಪುನರಾವರ್ತಿಯಾಗುವುದಿಲ್ಲ ಎಂದು ಅರಿತುಕೊಳ್ಳುತ್ತೇವೆ. ಪೋಷಕರ ಈ ವರ್ತನೆಯು ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಎಂದು ತಜ್ಞರು ಎಚ್ಚರಿಕೆ ನೀಡುತ್ತಾರೆ. ಮಕ್ಕಳು ತಪ್ಪು ಮಾಡಿದಾಗ ಹೊಡೆಯುವುದನ್ನು ತಪ್ಪಿಸಬೇಕಾಗುತ್ತದೆ. ಇದರ ಬದಲಿಗೆ ವಿಭಿನ್ನ ವಿಧಾನ ಪ್ರಯತ್ನಿಸಬೇಕಾಗುತ್ತದೆ. ಹೆಚ್ಚಾಗಿ ಮಕ್ಕಳನ್ನು ತೀವ್ರ ಕಾಳಜಿಯಿಂದ ಬೆಳೆಸುತ್ತೇವೆ. ಬಹುತೇಕರು ದುರ್ಬಲವಾದ ಗಾಜಿನ ಗೊಂಬೆಗಳಂತೆ ಬೆಳೆಸುತ್ತಾರೆ. ಇದರ ಪರಿಣಾಮವಾಗಿ ಮಕ್ಕಳು ಮೊಂಡುತನದಿಂದ ನಿರಾಕರಿಸಿದಾಗಲೂ ಮಳೆ ಬಂದಾಗ ಜಾಕೆಟ್‌ಗಳನ್ನು ಧರಿಸಲು ಅಥವಾ ಚಳಿಯಾದಾಗ ಸ್ವೆಟರ್‌ಗಳನ್ನು ಧರಿಸಲು ನಾವು ಒತ್ತಾಯಿಸುತ್ತೇವೆ. ಅವರಿಗೆ ಶೀತ ಅಥವಾ ಜ್ವರ ಬರಬಹುದು ಎಂದು ಎಚ್ಚರಿಕೆ ನೀಡುತ್ತೇವೆ. ಮಕ್ಕಳು ಆರಂಭದಲ್ಲಿ ಕೇಳದಿದ್ದರೆ ಅದನ್ನು ಬಿಟ್ಟುಬಿಡಬೇಕಾಗುತ್ತದೆ. ಮಗು ನಿಜವಾಗಿಯೂ ಮಳೆಯಲ್ಲಿ ಒದ್ದೆಯಾಗುವವರೆಗೆ ಇಲ್ಲವೇ ತಣ್ಣಗಾಗಿ ನಿಮ್ಮ ಬಳಿಗೆ ಬರುವವರೆಗೆ ಕಾಯಬೇಕಾಗುತ್ತದೆ. ಅದರೊಂದಿಗೆ ಮಾತನಾಡಲು ಸರಿಯಾದ ಕ್ಷಣ.

ಇದು ಕೆಲಸ ಮಾಡುತ್ತದೆ, ಏಕೆಂದರೆ, ಅವರು ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಾರೆ ಹಾಗೂ ಕೇಳಲು ಹೆಚ್ಚು ಸಿದ್ಧರಿರುತ್ತಾರೆ. ಇದಲ್ಲದೆ, ಅವರು ತಮ್ಮ ಸ್ವಂತ ಕ್ರಿಯೆಗಳ ಪರಿಣಾಮಗಳನ್ನು ಎದುರಿಸಲು ಕಲಿಯುತ್ತಾರೆ. ನೀವು ಕೋಪಗೊಂಡಾಗ ಅವರನ್ನು ಕತ್ತಲೆಯ ಕೋಣೆಯಲ್ಲಿ ಬಂಧಿಸುವ ಅಗತ್ಯವಿಲ್ಲ. ಬದಲಾಗಿ ಯಾರೊಂದಿಗೂ ಮಾತನಾಡದೆ 15 ನಿಮಿಷಗಳ ಕಾಲ ಮೂಲೆಯಲ್ಲಿ ಇಲ್ಲವೇ ಕೋಣೆಯಲ್ಲಿ ಶಾಂತವಾಗಿ ಕುಳಿತುಕೊಳ್ಳಲು ತಿಳಿಸಬೇಕಾಗುತ್ತದೆ.

ನಿಗದಿಪಡಿಸಿದ ಸಮಯ ಮುಗಿಯುವ ಮೊದಲು ಮಾತನಾಡುವುದು ಅವಧಿಯನ್ನು ಹೆಚ್ಚಿಸುತ್ತದೆ ಎಂದು ವಿವರಿಸಿ. ಮಕ್ಕಳು ನೋವು ಮತ್ತು ಕೋಪದಂತಹ ಭಾವನೆಗಳನ್ನು ಸಹ ಅನುಭವಿಸುತ್ತಾರೆ.

ಸಾಹಿತ್ಯ ಲೋಕದಲ್ಲಿ ಕಾದಂಬರಿ ಎನ್ನುವುದು ಕೇವಲ ಕಲ್ಪಿತ ಪುಟಗಳ ಜೋಡಣೆಯಲ್ಲ, ಬದಲಿಗೆ ಸಾಗುವ ಬದುಕಿನ ಸಮಗ್ರ ಪಠ್ಯವಾಗಿದೆ.

ಲೇಖಕರು : ಇಲಿಯಾಸ್ ಪಟೇಲ್ ಬಳಗಾನೂರು

ಹಳ್ಳಿಯ ಭೌಗೋಳಿಕ ಹಿನ್ನೆಲೆಯಿಂದ ಆರಂಭವಾಗಿ ಮನುಷ್ಯನ ಆಂತರಿಕ ಭಾವನೆಗಳ ಆಳ-ವಿಸ್ತಾರಗಳನ್ನು ಅಳೆಯುವ ದಿಕ್ಸೂಚಿಯಂತೆ ಸಾಹಿತ್ಯ ಕಾರ್ಯನಿರ್ವಹಿಸುತ್ತದೆ. ಈ ಸಾಲಿಗೆ ಹೊಸ ಸೇರ್ಪಡೆಯು 'ಉದಯವಾಹಿನಿ' ಪತ್ರಿಕೆಯ ವರದಿಗಾರರಾದ ಶ್ರೀಯುತ ಇಲಿಯಾಸ್ ಪಟೇಲ್ ಬಳಗಾನೂರು ಅವರ '

ಆಶಾ ಕಾರ್ಯಕರ್ತೆಯರಿಗಾಗಿ ಬೃಹತ್ ಆರೋಗ್ಯ ಮೇಳ: ಚಿತ್ರದುರ್ಗ ಜಿಲ್ಲಾ ಆಯುಷ್ ಇಲಾಖೆ ಆಯೋಜನೆ.

• ಉದಯವಾಹಿನಿ ,ಚಿತ್ರದುರ್ಗ

ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಚಿತ್ರದುರ್ಗ ಮತ್ತು ಆಯುಷ್ ಇಲಾಖೆ ಚಿತ್ರದುರ್ಗ ವತಿಯಿಂದ ಹೊಳಲ್ಕೆರೆ ತಾಲ್ಲೂಕಿನ ಆಶಾ ಕಾರ್ಯಕರ್ತರಿಗೆ ಬೃಹತ್ ಆರೋಗ್ಯ ಶಿಬಿರವನ್ನು ಏರ್ಪಡಿಸಲಾಯಿತು.

ಕಾರ್ಯಕ್ರಮದಲ್ಲಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಗೂಳಿಹೊಸಳ್ಳಿಯ ವೈದ್ಯಾಧಿಕಾರಿಗಳಾದ ಡಾ. ರಾಜೇಶ್ವರಿ ಇವರು ಆಗಮಿಸಿದ್ದ ಅತಿಥಿಗಳಿಗೆ ಸ್ವಾಗತವನ್ನು ಕೋರಿದರು. ಜಿಲ್ಲಾ ಕ್ಷಯ ರೋಗ ನಿಯಂತ್ರಣ ಅಧಿಕಾರಿಗಳಾದ ಶ್ರೀಮತಿ ಡಾ. ಸುಧಾ ಹಾಗೂ ಹೊಳಲ್ಕೆರೆ ತಾಲ್ಲೂಕು ಆರೋಗ್ಯ ವೈದ್ಯಾಧಿಕಾರಿಗಳಾದ ಡಾಕ್ಟರ್ ರವಿಕುಮಾರ್ ಅವರು ಗಿಡಕ್ಕೆ ನೀರು ಹಾಕುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಉದಯವಾಹಿನಿ ಚಿತ್ರ

ಕಾರ್ಯಕ್ರಮದಲ್ಲಿ ಡಾ.ಸುಧಾ ಅವರು ಒಬ್ಬ ವ್ಯಕ್ತಿಯು ತನ್ನ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ ಅವನಿಗೆ ತನ್ನ ಆಹಾರ ಹಾಗೂ ಅವನ ಜೀವನ ಶೈಲಿಗಳನ್ನು ಬದಲಾಯಿಸಿಕೊಳ್ಳುವುದು ಅತ್ಯವಶ್ಯಕ ಹಾಗೂ ಆಹಾರವೇ ಔಷಧಿಯಾಗಲಿ ಎಂದು ಆರೋಗ್ಯ ಸಲಹೆಗಳನ್ನು ನೀಡಿದರು. ಕಾರ್ಯಕ್ರಮದ ಪ್ರಸ್ತಾವಿಕ ನುಡಿಯಲ್ಲಿ ಡಾ.ರೇಷ್ಮಾ ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಚಿತ್ರಹಳ್ಳಿ ಇವರು ಕಾರ್ಯಕ್ರಮದ ಉದ್ದೇಶವನ್ನು ಸವಿಸ್ತಾರವಾಗಿ ತಿಳಿಸಿದರು. ಈ ಆರೋಗ್ಯ ಶಿಬಿರದಲ್ಲಿ ಸುಮಾರು 190 ಆಶಾ ಕಾರ್ಯಕರ್ತರಿಗೆ ಆರೋಗ್ಯ ತಪಾಸಣೆಯನ್ನು ಮಾಡಿ ಅವರಿಗೆ ಔಷಧಿಗಳನ್ನು ವಿತರಿಸಲಾಯಿತು . ಕಾರ್ಯಕ್ರಮದಲ್ಲಿ, ಶ್ರೀಮತಿ ಉಷಾ, ಮಲ್ಲೇಶಪ್ಪ, ಚೇತನ್ ಹಾಜರಿದ್ದರು. ಈ ಕಾರ್ಯಕ್ರಮವನ್ನು ಆಯುಷ್ ಇಲಾಖೆಯ ರಾಷ್ಟ್ರೀಯ ಆಯುಷ್ ಅಭಿಯಾನ ದ ಅಡಿಯಲ್ಲಿ ಅನುಷ್ಠಾನಗೊಳಿಸಲಾಯಿತು

ಬರ ಘೋಷಣೆ ಮಾಡದೆ, ಕೇಂದ್ರದಿಂದ ಹಣ ಕೇಳಿದರೆ ಹೇಗೆ?: ಆರ್. ಅಶೋಕ್

ಬಿಜೆಪಿ ತಂಡ ದಾವಣಗೆರೆ ಜಿಲ್ಲೆಯಲ್ಲಿ ಬರ ಅಧ್ಯಯನ ನಡೆಸಿತು. ಈ ವೇಳೆ ಬರಗಾಲ ಎಂದು ಘೋಷಿಸಲು

• ಉದಯವಾಹಿನಿ, ದಾವಣಗೆರೆ:

ರಾಜ್ಯ ಸರ್ಕಾರ ಬರಗಾಲ ಎಂದು ಘೋಷಣೆ ಮಾಡಿಲ್ಲ. ಆದರೆ, ಕೇಂದ್ರದಿಂದ ಹಣ ಕೇಳುತ್ತಿರುವುದು ನಾಚಿಗೆಗೇಡಿನ ಸಂಗತಿ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಕಾಂಗ್ರೇಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ತಾಲೂಕಿನ ನೇರ್ಲಿಗೆ ಗ್ರಾಮದಲ್ಲಿ ಬರ ಅಧ್ಯಯನ ಮಾಡಿದ

1 : ಖಜಾನೆ ಖಾಲಿಯಾಗಿದೆ
2 : 19 ಪರ್ಸೆಂಟ್ ಅಷ್ಟೇ
3 : ಬರ ಘೋಷಣೆ ಮಾಡ್ತಿಲ್ಲ

ಬಳಿಕ ಮಾತನಾಡಿದ ಅವರು, ರಾಜ್ಯದ ಜನರ ಸಮಸ್ಯೆ ಅರಿಯುವ ಬದಲು ರಾಜ್ಯ ಸರ್ಕಾರ ದೆಹಲಿಯಲ್ಲಿ ವಾಸ್ತವ್ಯ ಹೂಡಿದೆ. ಸಿಎಂ ಡಿಕೆಶಿ ಅವರ ಸಾಧನೆ ಶೂನ್ಯ. ಸಿದ್ದರಾಮಯ್ಯ ಅವರನ್ನು ಹೊರ ಹಾಕಿ ಇವರು ಸೊನ್ನೆ ಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು. ದಾವಣಗೆರೆ ಜಿಲ್ಲೆಯಲ್ಲಿ ಬಿತ್ತನೆ ಆಗಿರೋದು 19 ಪರ್ಸೆಂಟ್ ಅಷ್ಟೇ. ಮಳೆ ಇಲ್ಲದೆ ಅಡಿಕೆ ತೋಟಗಳು ಸಂಪೂರ್ಣ ನಾಶವಾಗಿವೆ. ಬೆಳೆ ಹಾನಿ ಹಾಗೂ ಅಡಿಕೆ ನಾಶಕ್ಕೆ ಪರಿಹಾರವಾಗಿ ರಾಜ್ಯ ಸರ್ಕಾರ ಒಂದು ಅಡಿಕೆ ಗಿಡಕ್ಕೆ 16 ರೂಪಾಯಿ ಕೊಡುತ್ತಿದೆ. ರಾಜ್ಯ ಸರ್ಕಾರದ ಖಜಾನೆ ಖಾಲಿಯಾಗಿದೆ. ಡ್ಯಾಂಗಳು ಕೂಡ ಖಾಲಿಯಾಗಿವೆ. ಕೇಂದ್ರಕ್ಕೆ 10 ಸಾವಿರ ಕೋಟಿ ಕೇಳ್ತಾ ಇದ್ದೀರಾ. ಬರ ಘೋಷಣೆ ಮಾಡದೆ ಯಾವ ರೀತಿ ಕೊಡಬೇಕು. ಯಾವ ಆಧಾರದ ಮೇಲೆ ಕೇಳ್ತಾ ಇದೀರಿ. ಬರ ಘೋಷಣೆ ಮಾಡದೆ ಜನರ ಜೀವನದ ಜೊತೆ ರಾಜ್ಯ ಸರ್ಕಾರ ಆಟವಾಡುತ್ತಿದೆ. ರಾಷ್ಟ್ರೀಯ ವಿಪತ್ತು ಅಂತ ಘೋಷಣೆ ಮಾಡಿ ಎಂದು ಕಾಂಗ್ರೇಸ್‌ನವರೇ ಕೇಳುತ್ತಿದ್ದಾರೆ ಎಂದು ಹೇಳಿದರು. ಕಾವೇರಿ ಅಣೆಕಟ್ಟೆಯಿಂದ ನೀರು ಬಿಡಲು ಆದೇಶ ಆಗಿದೆ. ಇದು ಕಾಂಗ್ರೇಸ್ ಸರ್ಕಾರದ ವೈಫಲ್ಯ. ಸಿಎಂ ಆದವರಿಗೆ ಜಲಾಶಯಗಳಿಗಿಂತ ಕಾಕ್ರೋಚ್ ಪಾರ್ಟಿ ಸಭೆ ಮುಖ್ಯ. ತಮಿಳುನಾಡು ಸರ್ಕಾರ ಇಂಡಿಯಾ ಕೂಟದ ಭಾಗ ಎಂದರು. ದಾವಣಗೆರೆ, ಚಿತ್ರದುರ್ಗ ಕಡೆ ಬರ ಅಧ್ಯಯನ ಮಾಡಿದ್ದೇವೆ. ಸರ್ಕಾರದಿಂದ 10 ಸಾವಿರ ಕೋಟಿ ರೂಪಾಯಿ ಬಿಡುಗಡೆ ಆಗಬೇಕು.

ಅಡಿಕೆ, ತೆಂಗಿನ ಮರಕ್ಕೆ ಪರಿಹಾರ ಕೊಡಬೇಕು. 50 ಕೋಟಿ ರೂಪಾಯಿ ಒಂದು ವಿಧಾನಸಭಾ ಕ್ಷೇತ್ರಕ್ಕೆ ಕೊಡಬೇಕು. ಮೇವು, ನೀರಿನ ಸಮಸ್ಯೆ ಬಗೆಹರಿಸಬೇಕು. ಬಿಜೆಪಿ ನಾಯಕರು ರಾಜ್ಯದಲ್ಲಿ ಬರ ಅಧ್ಯಯನ ಮಾಡುತ್ತಿದ್ದೇನೆ. ಇದರ ಬಗ್ಗೆ ವಿಧಾನಸಭೆಯಲ್ಲಿ ಧ್ವನಿ ಎತ್ತಲಿದ್ದೇವೆ ಎಂದು ಅವರು ತಿಳಿಸಿದರು. ಮೇಕೆದಾಟು ಯೋಜನೆಗೆ ಕೇಂದ್ರದ ಅಡಚಣೆ, ಅಡ್ಡಗಾಲು ಎಂದು ಈವರೆಗೂ ಆರೋಪಿಸುತ್ತಿದ್ದರು. ಈಗ ಕೇಂದ್ರ ಗ್ರೀನ್ ಸಿಗ್ನಲ್ ಕೊಟ್ಟಿದೆ. ಬಿಜೆಪಿಯ ಬರ ಅಧ್ಯಯನ ತಂಡದಲ್ಲಿ ಮಾಜಿ ಸಚಿವ ಬೈರತಿ ಬಸವರಾಜ್, ಶಾಸಕ ಬಿ ಪಿ ಹರೀಶ್ ಸೇರಿದಂತೆ ಬಿಜೆಪಿ ನಾಯಕರು ಇದ್ದರು.

ಉದಯವಾಹಿನಿ ಚಿತ್ರ

ಮೇಕೆದಾಟು ಯೋಜನೆ ಶುರು ಮಾಡಿ ಸಿಎಂ ಅವರೇ. ಕೆಆರ್‌ಎಸ್‌ನಿಂದ ತಮಿಳುನಾಡಿಗೆ ಕದ್ದುಮುಚ್ಚಿ ನೀರು ಬಿಡುಗಡೆಯಾಗಲಿದೆ. ಬೆಂಗಳೂರಿಗೆ ಅಷ್ಟೇ ಅಲ್ಲ, ಮಂಡ್ಯ ಮೈಸೂರಿಗೂ ನೀರಿನ ಸಮಸ್ಯೆ ಆಗಲಿದೆ. 4.5 ಟಿಎಂಸಿ ನೀರು ಕೊಟ್ಟರೆ ಉಳಿಯುವ ನೀರು 4 ಟಿಎಂಸಿ. ಆಗ ಏನ್ ಮಾಡ್ತಾರೆ ಎಂದು ಪ್ರಶ್ನಿಸಿದರು. -ಆರ್ ಅಶೋಕ್

ಅಧ್ಯಯನಕ್ಕೆ ಸಿಎಂ ತಂಡ ಬಂದಿದೆಯಾ? ಬರ ಎಂದು ಘೋಷಣೆ ಮಾಡದೆ ಇದ್ದರೆ ಕೇಂದ್ರ ಸರ್ಕಾರದ ತಂಡ ಬರಲ್ಲ. ಬರ ಅಧ್ಯಯನಕ್ಕೆ ಸಿಎಂ ತಂಡ ಬಂದಿದೆಯಾ?, ಜಿಲ್ಲಾಡಳಿತ ತಂಡ ವರದಿ ಕೊಡಲಿ. ಅವರು ಎಲ್ಲಿ ವರದಿ ಕೊಟ್ಟಿದ್ದಾರೆ. ಈ ಸರ್ಕಾರ ಹಣ ಇಲ್ಲದೆ ಪಾಪರ್ ಆಗಿದೆ. ಇವರ ಬಳಿ ಗ್ಯಾರಂಟಿಗಳಿಗೆ ಕೊಡಲು ಹಣ ಇಲ್ಲ. ವೃದ್ಧರಿಗೆ ಮಾಸಾಶನ ನೀಡಲು ಹಣ ಇಲ್ಲ. -ಆರ್ ಅಶೋಕ್

ಇವರ ಬಳಿ ಹಣ ಇಲ್ಲ, ಖಜಾನೆ ಖಾಲಿಯಾಗಿದೆ. ಕೇಂದ್ರ ಸರ್ಕಾರದ ಬಳಿ ಅನುದಾನ ಕೇಳ್ತಿದ್ದಾರೆ. ಅದಕ್ಕೆ ರಾಜ್ಯದಲ್ಲಿ ಇವರು ಬರ ಘೋಷಣೆ ಮಾಡ್ತಿಲ್ಲ. ಭಾರತ್ ಜೋಡೊ ಕ್ಲಬ್‌ಗೆ ನೂರಾರು ಕೋಟಿ ಹಣ ಕೊಟ್ಟಿದ್ದಾರೆ. ವಿಧಾನಸೌಧದ ಬಳಿ ಭಾರತ್ ಜೋಡೋದಲ್ಲಿ ಪಾಲ್ಗೊಂಡವರಿಗೆ ಬಂಗ್ಲೆ, ಅಧ್ಯಕ್ಷರಾಗಿರುವವರಿಗೆ ಸಂಬಳ ಕೊಡ್ತಿದ್ದಾರೆ. ಭಾರತ್ ಜೋಡೊ ಕಾಂಗ್ರೆಸ್ ಗಂಜಿಕೇಂದ್ರ ಎಂದು ಟೀಕಿಸಿದರು. -ಆರ್ ಅಶೋಕ್

10 ಸಾವಿರ ಕೋಟಿ ರೂಪಾಯಿ ಬಿಡುಗಡೆ ಆಗಬೇಕು.

ಎಸ್‌ಬಿಆರ್ ಶಾಲೆಯಲ್ಲಿ ಸಂಚಾರ ನಿಯಮಗಳ ಕುರಿತು ಜಾಗೃತಿ

• ಉದಯವಾಹಿನಿ, ಕಲಬುರಗಿ,

ಶರಣಬಸವೇಶ್ವರ ರೆಸಿಡೆನ್ಸಿಯಲ್ ಪಬ್ಲಿಕ್ ಶಾಲೆಯ 1 ರಿಂದ 5ನೇ ತರಗತಿಯ ವಿದ್ಯಾರ್ಥಿಗಳು ಇತ್ತೀಚೆಗೆ ಸಂಚಾರ ನಿಯಮಗಳ ಕುರಿತು ಪ್ರದರ್ಶನ ಮತ್ತು ಪ್ರಾಯೋಗಿಕ ನಾಟಕಗಳನ್ನು ಪ್ರಸ್ತುತಪಡಿಸಿದರು. ರಸ್ತೆ ದಾಟುವಾಗ ಪ್ರತಿಯೊಬ್ಬರೂ ಪಾಲಿಸಬೇಕಾದ ಸಂಚಾರ ನಿಯಮಗಳ ಬಗ್ಗೆ ಈ ಪ್ರದರ್ಶನದ ಮೂಲಕ ಮಕ್ಕಳು ಜಾಗೃತಿ ಮೂಡಿಸಿದರು.

ನಿಯಮಗಳ ಉಲ್ಲಂಘನೆಯು ಭೀಕರ ಅಪಘಾತಗಳು ಮತ್ತು ವಿವಿಧ ಆಹಿತಕರ ಘಟನೆಗಳಿಗೆ ಕಾರಣವಾಗುತ್ತದೆ ಎಂಬುದನ್ನು ಅವರು ಎತ್ತಿ ತೋರಿಸಿದರು. ರಸ್ತೆ ದಾಟುವಾಗ ಮೊಬೈಲ್ ಫೋನ್‌ಗಳನ್ನು ಬಳಸಬಾರದು ಹಾಗೂ ವಾಹನ ಚಲಾಯಿಸುವಾಗ ಹೆಲ್ಮೆಟ್ ಧರಿಸುವುದು ಕಡ್ಡಾಯವಾಗಿದೆ ಎಂದು ಅವರು ತಿಳಿಸಿದರು. ಈ ವಿವಿಧ ಸಂಚಾರ ನಿಯಮಗಳನ್ನು ಪಾಲಿಸುವುದರಿಂದ ರಸ್ತೆ ಅಪಘಾತಗಳನ್ನು ಹೇಗೆ ತಡೆಗಟ್ಟಬಹುದು ಎಂಬುದನ್ನು ಪ್ರದರ್ಶಿಸುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಅಲ್ಲದೆ, ಶಾಲಾ ಆವರಣದಲ್ಲಿಯೂ ಸಹ ರಸ್ತೆ ದಾಟುವಾಗ ವಾಹನಗಳಿಗೆ ಸಂಬಂಧಿಸಿದ ಸಂಚಾರ ಮಾರ್ಗಸೂಚಿಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದು ತಿಳಿಸಲಾಯಿತು.

ಉದಯವಾಹಿನಿ ಚಿತ್ರ

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಮೇಲ್ವಿಚಾರಕರಾದ ಶ್ರೀ ಶೈಲ ಹೊಗಡೆ ಮತ್ತು ಹೇಮಂತ್‌ಕುಮಾರ್, ಹಿರಿಯ ಶಿಕ್ಷಕಿ ಶ್ರೀಮತಿ ಶಾರದಾ ರಾಂಪುರೆ, ಇತರ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಭಾಗವಹಿಸಿದ್ದರು. ಭಾಗವಹಿಸಿದವರೆಲ್ಲರೂ ಸಂಚಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದಾಗಿ ಪ್ರತಿಜ್ಞೆ ಮಾಡಿದರು. ಸಂಸ್ಥೆಯ 9ನೇ ಪೀಠಾಧಿಪತಿಗಳಾದ ಶ್ರೀ ಚಿ. ದೊಡ್ಡಪ್ಪ ಅಪ್ಪಾ, ಶರಣಬಸವೇಶ್ವರ ವಿಶ್ವವಿದ್ಯಾಲಯದ ಕುಲಪತಿಗಳಾದ ಪೂಜ್ಯ ಮಾತೋಶ್ರೀ ಡಾ.ದಾಕ್ಷಾಯಣಿ ಅವ್ವಾಜಿ, ಸಂಸ್ಥೆಯ ಕಾರ್ಯದರ್ಶಿ ಶ್ರೀ ಬಸವರಾಜ ದೇಶಮುಖ್ ಮತ್ತು ಪ್ರಾಂಶುಪಾಲರಾದ ಶ್ರೀ ಎನ್.ಎಸ್. ದೇವರಕಲ್ ಅವರು ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಪದವಿ ಶುಲ್ಕ ಹೆಚ್ಚಳ ಆದೇಶ ಹಿಂಪಡೆಯಲು-ಎಐಡಿಎಸ್‌ಓ ಆಗ್ರಹ

• ಉದಯವಾಹಿನಿ, ಹೊಸಪೇಟೆ.

ಪದವಿ ವಿದ್ಯಾರ್ಥಿಗಳ ಶುಲ್ಕವನ್ನು ದಿಢೀರ್ ಏರಿಕೆ ಮಾಡಿರುವುದನ್ನು ತೀವ್ರವಾಗಿ ಖಂಡಿಸಿರುವ ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್, ಪದವಿ ಶುಲ್ಕ ಏರಿಕೆ ಆದೇಶವನ್ನು ತಕ್ಷಣವೇ ಹಿಂಪಡೆಯುವಂತೆ ಒತ್ತಾಯಿಸಿದೆ. ಪದವಿ ವಿದ್ಯಾರ್ಥಿಗಳ ಶುಲ್ಕವನ್ನು ಏಕಾಏಕಿ 1,300 ಹೆಚ್ಚಿಸಿರುವುದು ಖಂಡಿಸಿ ಹಾಗೂ ಶುಲ್ಕ ಹೆಚ್ಚಳ ಆದೇಶವನ್ನು ತಕ್ಷಣವೇ ವಾಪಾಸು ಪಡೆಯುವಂತೆ ಒತ್ತಾಯಿಸಿ, ಎಐಡಿಎಸ್‌ಓ ಸಂಘಟನೆ ನೇತೃತ್ವದಲ್ಲಿ ವಿದ್ಯಾರ್ಥಿಗಳು ಸ್ಥಳೀಯ ಶಂಕರ್ ಆನಂದ್ ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ವೀರಭದ್ರಪ್ಪ ಅವರಿಗೆ ಮನವಿಪತ್ರ ಸಲ್ಲಿಸಿದರು. ಈ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಹುತೇಕ ವಿದ್ಯಾರ್ಥಿಗಳು ಬಡ, ಮಧ್ಯಮ ವರ್ಗ ಹಾಗೂ ರೈತ-ಕಾರ್ಮಿಕ ಕುಟುಂಬಗಳಿಗೆ ಸೇರಿದವರಾಗಿದ್ದಾರೆ. ಈಗಾಗಲೇ ಶಿಕ್ಷಣ, ವಸತಿ ಹಾಗೂ ಅಧ್ಯಯನ ಸಾಮಗ್ರಿಗಳ ಬೆಚ್ಚ ನಿರಂತರವಾಗಿ ಏರುತ್ತಿದೆ. ಎಷ್ಟೋ ಬಡ ವಿದ್ಯಾರ್ಥಿಗಳು ಪಾರ್ಟ್ ಟೈಮ್ ಕೆಲಸ ಮಾಡುತ್ತಾ ವ್ಯಾಸಂಗ ಮಾಡುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಈ ಹೆಚ್ಚುವರಿ ಶುಲ್ಕವು ವಿದ್ಯಾರ್ಥಿಗಳು ಮತ್ತು ಅವರ ಪೋಷಕರ ಮೇಲೆ ಅನಗತ್ಯ ಆರ್ಥಿಕ ಹೊರೆಯನ್ನು ಹೇರುತ್ತದೆ. ಇದರಿಂದ ಅನೇಕ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುವ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆಯಿದೆ. ಶಿಕ್ಷಣವು ಎಲ್ಲರಿಗೂ ಕೈಗೆಟುಕುವಂತಿರಬೇಕು.

ಯಾವುದೇ ಸಮರ್ಪಕ ಕಾರಣವಿಲ್ಲದೆ ವಿಧಿಸಿರುವ ಈ ಶುಲ್ಕ ಹೆಚ್ಚಳವನ್ನು ವಿದ್ಯಾರ್ಥಿ ಸಮುದಾಯ ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ.

ಉದಯವಾಹಿನಿ ಚಿತ್ರ


ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಕ್ಷಣವೇ ಈ ನಿರ್ಧಾರವನ್ನು ಮರುಪರಿಶೀಲಿಸಿ ಎಂದು ಆಗ್ರಹಿಸಿದರು. ಅಲ್ಲದೆ ನಮ್ಮ ಬೇಡಿಕೆಗಳನ್ನು ವಿಶ್ವವಿದ್ಯಾಲಯವು ತಕ್ಷಣವೇ ಈಡೇರಿಸಬೇಕು ಎಂದು ಒತ್ತಾಯಿಸಿದರು.

ವಿಶ್ವ ಕುದಿಯುವಿಕೆಯಿಂದ ಪಾರಾಗುವಿಕೆ ದೊಡ್ಡ ಸವಾಲು : ಪರತಾಪೂರೆ

• ಉದಯವಾಹಿನಿ, ಬಸವಕಲ್ಯಾಣ:

ಜಾಗತಿಕ ತಾಪಮಾನ ಮೀರಿ ಉಷ್ಣತೆ ಉಲ್ಬಣಗೊಂಡು ಇಡೀ ವಿಶ್ವವೇ ಕುದಿಯುವಿಕೆಯಿಂದ ಬಳಲುತ್ತಿದೆ ಎಂದು ನಿವೃತ್ತ ಪ್ರಾಧ್ಯಾಪಕ ಪ್ರೊ ಸಿ.ಬಿ. ಪರತಾಪೂರೆ ಹೇಳಿದರು. ನಗರದ ಶ್ರೀ ಬಸವೇಶ್ವರ ಪದವಿ ಕಾಲೇಜಿನಿಂದ ಬಿಕೆಡಿಬಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ 'ಶಿಕ್ಷಣ, ಮೌಲ್ಯ ಮತ್ತು ಯಶಸ್ಸು' ಕುರಿತು ಉಪನ್ಯಾಸ ಮತ್ತು ಬಿಕಾಂ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಪ್ರಕೃತಿ ವಿಕೋಪದ ಪರಿಣಾಮ ಈ ಕಾಲದಲ್ಲಿ ಅತ್ಯಂತ ಭೀಕರವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಭಾರತದಲ್ಲಿ ಆರ್ಥಿಕತೆ ಸೇರಿ ಹಲವು ಕ್ಷೇತ್ರಗಳಲ್ಲಿ ಹೊಸ ಸವಾಲುಗಳು ಎದುರಾಗುತ್ತಿವೆ. ಅದರ ಕುರಿತು ಆಳದ ಅಧ್ಯಯನ ಮತ್ತು ಸಂಶೋಧನೆ ಅಗತ್ಯ. ಪಠ್ಯದ ಓದುವಿಕೆ ಇಡೀ ಸಮಾಜದ ಓದುವಿಕೆಯೂ ಆಗಿರುತ್ತದೆ. ಹಲವು ಸಂದಿಗ್ಧ ಸಂದರ್ಭ ಎದುರಿಸು ಎದೆಗಾರಿಕೆ ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು. ಹಲವು ಜ್ಞಾನ ಶಾಖೆಗಳು ಓದುವ ನಮ್ಮ ವಿದ್ಯಾರ್ಥಿಗಳಿಗೆ ನೈತಿಕ ಶಿಕ್ಷಣ ಪಠ್ಯವಾಗಬೇಕಾದ ಅಗತ್ಯವಿದೆ ಎಂದರು.

ವೈದ್ಯ ಡಾ. ಅಭಯ ಸಮದರೆ ಮಾತನಾಡಿ, ಈ ಕಾಲಘಟ್ಟದಲ್ಲಿ ಎಲ್ಲರಿಗೂ ಎಲ್ಲೆಡೆಯೂ ಆರೋಗ್ಯ ಕಾಪಾಡುವ ಮತ್ತು ರೋಗಗಳಿಂದ ರಕ್ಷಣೆ ಪಡೆದುಕೊಳ್ಳುವ ಸವಾಲು ದೊಡ್ಡದಾಗಿದೆ. ವ್ಯಕ್ತಿಯ ಜೀವನ ಶೈಲಿ, ಆಹಾರಕ್ರಮ, ಆಲೋಚನೆಗಳು, ಒಳ-ಹೊರಗಿನ ಒತ್ತಡಗಳು ಮನುಷ್ಯನ ಆರೋಗ್ಯ ನಿರ್ಧರಿಸುತ್ತವೆ. ಎಲ್ಲರಲ್ಲೂ ಆರೋಗ್ಯ ಪ್ರಜ್ಞೆ ಮೂಡುವುದೇ ಸಮಾಜಿಕ ಬೆಳವಣಿಗೆಯ ರಹದಾರಿ ಎಂದರು.

ಉದಯವಾಹಿನಿ ಚಿತ್ರ

ಮನಸ್ಸು ಮತ್ತು ದೇಹ ಎರಡೂ ಕ್ರಿಯಾಶೀಲತೆಯಿಂದ ಇಡುವ ಮೂಲಕ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯ. ನಿರಂತರ ಓದು, ಸತ್ವಯುತ ಆಹಾರ, ಒಳ್ಳೆಯ ಯೋಚನೆ, ಸುತ್ತಲಿನ ನೈರ್ಮಲ್ಯ ಇವೆಲ್ಲವು ನಮ್ಮ ಆರೋಗ್ಯ ನಿರ್ಧರಿಸುತ್ತವೆ. ರೋಗ ಬಾರದ ದಾರಿಯ ಅರಿವು ಎಲ್ಲರಲ್ಲಿ ಬೆಳೆಯಲಿ ಎಂದು ಆಶಿಸಿದರು. -ಡಾ. ಶರಣ್ ದೇಶಮುಖ್

ಮದ್ಯದಂಗಡಿ ತೆರವುಗೊಳಿಸುವಂತೆ ಮನವಿ

• ಉದಯವಾಹಿನಿ, ಚನ್ನಮ್ಮನ ಕಿತ್ತೂರು,:

ತಾಲೂಕಿನ ಖೋದಾನಪುರ ಗ್ರಾಮದಲ್ಲಿನ ಮಧ್ಯದಂಗಡಿ ಬಂದ್ ಮಾಡಬೇಕೆಂದು ಆಗ್ರಹಿಸಿ ಗ್ರಾಮದ ಮಹಿಳೆಯರು ಹಾಗೂ ಕರ್ನಾಟಕ ಬಹುಜನ ಚಳುವಳಿ ಸಂಘದ ಕಾರ್ಯಕರ್ತರು ತಹಶೀಲ್ದಾರ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ನಂತರ ತಹಶೀಲ್ದಾರ ಕಲ್ಲನಗೌಡ ಪಾಟೀಲ ಅವರಿಗೆ ಮಧ್ಯದಂಗಡಿ ತೆರವುಗೊಳಿಸುವಂತೆ ಮನವಿ ಸಲ್ಲಿಸಿದರು. ಖೋದಾನಪುರ ಗ್ರಾಮದಲ್ಲಿ ಮೊದಲು ದಾಬಾ ಹೆಸರಿನಲ್ಲಿ ವ್ಯವಹಾರ ಆರಂಭಿಸಿ, ನಂತರ ಅದೇ ಸ್ಥಳದಲ್ಲಿ 'ಶ್ರೀ ಸಾಯಿ ಸ್ಪೋರ್ಟ್ಸ್ ಕ್ಲಬ್' ಎಂಬ ಹೆಸರಿನಲ್ಲಿ ಮದ್ಯ ಮಾರಾಟ ಮಾಡಲಾಗುತ್ತಿದೆ. ಇದು ನಿಜವಾಗಿಯೂ ಸ್ಪೋರ್ಟ್ಸ್ ಕ್ಲಬ್ ಆಗಿದ್ದರೆ ಅಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಸೌಲಭ್ಯಗಳು, ಆಟದ ಸಾಮಗ್ರಿಗಳು ಅಥವಾ ಕ್ರೀಡಾ ವಾತಾವರಣ ಕಾಣಿಸುತ್ತಿಲ್ಲ. ಇದರ ಕುರಿತು ಅಬಕಾರಿ ಇಲಾಖೆ ಸ್ಪಷ್ಟನೆ ನೀಡಬೇಕು. ಇಂತಹ ಸ್ಥಳಗಳಿಗೆ ಪರವಾನಗಿ ನೀಡಿದ್ದು ಹೇಗೆ? ಈ ಸ್ಥಳ ಪರಿಶೀಲನೆ ನಡೆಸಲಾಗಿದೆಯೇ ನಿಯಮಾನುಸಾರ ಪರವಾನಗಿ ನೀಡಿದ್ದೀರಾ ಅಲ್ಲಿ ನಿಜವಾಗಿಯೂ ಕ್ರೀಡಾ ಚಟುವಟಿಕೆಗಳು ನಡೆಯುತ್ತಿವೆಯೇ ಎಂದು ಪ್ರಶ್ನಿಸಿದರು. ನಮ್ಮ ಗ್ರಾಮಕ್ಕೆ ಮಧ್ಯ ಸೇವ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	01:30 ರಿಂದ 03:00
ಗುಳಿಕ ಕಾಲ	ಬೆಳಿಗ್ಗೆ	09:00 ರಿಂದ 10:30
ಯಮಗಂಡ ಕಾಲ	ಬೆಳಿಗ್ಗೆ	06:00 ರಿಂದ 07:30

ಮೇಷ ಒತ್ತಡ ತೊಡೆದುಹಾಕಲು ನಿಮ್ಮ ಮಕ್ಕಳ ಜೊತೆ ನಿಮ್ಮ ಅಮೂಲ್ಯ ಸಮಯ ಕಳೆಯಿರಿ. ನೀವು ಮಗುವಿನ ಗುಣಪಡಿಸುವ ಶಕ್ತಿಯನ್ನು ಅನುಭವಿಸುತ್ತೀರಿ. ಅವರು ಭೂಮಿಯ ಮೇಲೆ ಅತ್ಯಂತ ಶಕ್ತಿಯುತ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ವ್ಯಕ್ತಿತ್ವವಾಗಿರುತ್ತಾರೆ. ನೀವೇ ಮರುಚೈತನ್ಯ ಹೊಂದುತ್ತೀರಿ.

ವೃಷಭ ಧೂಮಪಾನ ತ್ಯಜಿಸುವುದು ನೀವು ದೈಹಿಕವಾಗಿ ಆರೋಗ್ಯವಾಗಿ ಉಳಿಯಲು ಸಹಾಯ ಮಾಡುತ್ತದೆ. ಸ್ನೇಹಿತರೊಂದಿಗೆ ಪಾರ್ಟಿಯಲ್ಲಿ ಸಾಕಷ್ಟು ಹಣವನ್ನು ಖರ್ಚು ಮಾಡಬಹುದು ಇದರ ಹೊರೆತಾಗಿಯೂ ನಿಮ್ಮ ಆರ್ಥಿಕ ಭಾಗವು ಬಲವಾಗಿರುತ್ತದೆ ಹಿರಿಯ ವ್ಯಕ್ತಿಯ ಆರೋಗ್ಯ ಕೊಂಚ ಆತಂಕಕ್ಕೆ ಕಾರಣವಾಗುತ್ತದೆ.

ಮಿಥುನ ನಿಮ್ಮ ಪ್ರಚಂಡ ಬೌದ್ಧಿಕ ಸಾಮರ್ಥ್ಯ ಅಂಗವೈಕಲ್ಯದ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಕೇವಲ ಸಕಾರಾತ್ಮಕ ಆಲೋಚನೆಗಳ ಜೊತೆ ಮಾತ್ರ ನೀವು ಈ ಸಮಸ್ಯೆಯ ವಿರುದ್ಧ ಹೋರಾಡಬೇಕು. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು.

ಕರ್ಕಾಟಕ ಮಾನಸಿಕ ಒತ್ತಡ ತರುವ ಸುಪ್ತ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಪ್ರಯಾಣ ಮಾಡುವ ಹಣ ಖರ್ಚು ಮಾಡುವ ಮನಸ್ಥಿತಿಯಲ್ಲಿರುತ್ತೀರಿ. ಹಾಗೆ ಮಾಡಿದಲ್ಲಿ ನೀವು ವಿಷಾದಿಸುತ್ತೀರಿ. ನಿಮ್ಮ ನಡೆಯಲ್ಲಿ ಉದಾರ ಮನೋಭಾವ ಹೊಂದಿರಿ ಕುಟುಂಬದ ಸದಸ್ಯರ ಜೊತೆಗೆ ಉತ್ತಮವಾದ ಪ್ರೀತಿಯ ಕ್ಷಣಗಳನ್ನು ಕಳೆಯಿರಿ.

ಸಿಂಹ ನಿಮ್ಮ ಹೆಂಡತಿಯ ಜೊತೆ ಕುಟುಂಬದ ಸಮಸ್ಯೆಗಳನ್ನು ಹಂಚಿಕೊಳ್ಳಿ. ನಮ್ಮನ್ನು ನೀವೇ ಒಂದು ಪ್ರೀತಿಯ ಪೋಷಿಸುವ ಜೋಡಿಯೆನ್ನುವುದನ್ನು ಪುನಃ ಕಂಡು ಹಿಡಿಯಲು ಸ್ವಲ್ಪಸಮಯ ಖರ್ಚು ಮಾಡಿ. ನಿಮ್ಮ ಮಕ್ಕಳೂ ಕೂಡ ಮನೆಯಲ್ಲಿನ ಶಾಂತಿ ಸಾಮರಸ್ಯದ ವಾತಾವರಣವನ್ನು ಆವಾಹಿಸಿಕೊಳ್ಳುತ್ತಾರೆ.

ಕನ್ಯಾ ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದಾದರೂ ನಿಮ್ಮ ಬದುಕನ್ನು ಲಘುವಾಗಿ ತೆಗೆದುಕೊಳ್ಳಬೇಡಿ ಹಾಗೂ ಜೀವನದ ರಕ್ಷಣೆ ನಿಮ್ಮ ನಿಜವಾದ ಹೊಣೆಗಾರಿಕೆಯೆಂದು ಅರ್ಥ ಮಾಡಿಕೊಳ್ಳಿ. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಉತ್ತಮ ಬೆಲೆಗೆ ಮಾರಾಟ ಮಾಡಬಹುದು,

ತುಲಾ ಧ್ಯಾನ ಯೋಗವನ್ನು ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗಾಗಿ ಆಚರಿಸಬೇಕು. ಸ್ವಲ್ಪ ಹೆಚ್ಚು ಹಣ ಮಾಡಲು ನಿಮ್ಮ ನವೀನ ಕಲ್ಪನೆಯನ್ನು ಬಳಸಿ. ವಾದಗಳು ಜಗಳಗಳು ಮತ್ತು ಇತರರ ಜೊತೆ ಅನಾವಶ್ಯಕವಾಗಿ ದೋಷಕಂಡುಹಿಡಿಯುವದನ್ನು ತಪ್ಪಿಸಿ. ಪ್ರೀತಿಪಾತ್ರರು ನಿಮ್ಮನ್ನು ಸಂತೋಷವಾಗಿರಿಸಲು ಕೆಲಸಗಳನ್ನು ಮಾಡುತ್ತಾರೆ.

ವೃಶ್ಚಿಕ ನೀವು ಚೈತನ್ಯಯುಕ್ತವಾಗಿರುತ್ತೀರಿ ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ.

ಧನಸ್ಸು ಮನೆಯ ಅಗತ್ಯಗಳನ್ನು ನೋಡುತ್ತಾ, ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು. ನಿಮ್ಮ ನಾಲಗೆ ನಿಮ್ಮ ಅಜ್ಜ ಅಜ್ಜಿಯಂದಿರ ಭಾವನೆಗಳಿಗೆ ಫಾಸಿ ಮಾಡುವುದರಿಂದ ನಿಮ್ಮ ಭಾಷೆಯನ್ನು ನಿಯಂತ್ರಿಸಿ.

ಮಕರ ನಿಮ್ಮನ್ನು ಪ್ರೇರೇಪಿಸುವ ಭಾವನೆಗಳನ್ನು ಗುರುತಿಸಿ. ನೀವು ಭಯ, ಅನುಮಾನ, ಕೋಪ, ದುರಾಸೆಯಂಥ ನಕಾರಾತ್ಮಕ ಆಲೋಚನೆಗಳನ್ನು ಬಿಡಬೇಕು. ಏಕೆಂದರೆ ಇವುಗಳು ನೀವು ಬಯಸುವುದಕ್ಕೆ ವಿರುದ್ಧವಾದವುಗಳನ್ನು ಆಕರ್ಷಿಸಲು ಆಯಸ್ಕಾಂತದಂತೆ ಕೆಲಸ ಮಾಡುತ್ತದೆ. ಪ್ರೀತಿಪಾತ್ರರು ಪ್ರಣಯದ ಮೂಡ್‌ನಲ್ಲಿರುತ್ತಾರೆ.

ಕುಂಭ ನಿಮ್ಮ ಆರೋಗ್ಯ ಸುಧಾರಿಸುವುದನ್ನು ಪ್ರಾರಂಭಿಸಲು ಅತ್ಯುತ್ತಮ ದಿನ. ಯಾರಿಂದಲೂ ಸಲಹೆಯನ್ನು ತೆಗದುಕೊಳ್ಳದೆ ನೀವು ಹಣವನ್ನು ಎಲ್ಲಿಯೂ ಹೂಡಿಕೆ ಮಾಡಬಾರದು. ನಿಮ್ಮ ಮನೆಯ ವಾತಾವರಣವನ್ನು ಬದಲಾಯಿಸುವ ಮೊದಲು ಅದಕ್ಕೆ ಇತರರ ಅನುಮೋದನೆಯಿದೆಯೆಂದು ಖಾತ್ರಿಪಡಿಸಿಕೊಳ್ಳಿ.

ಮೀನ ಸರ್ವತೋಮುಖ ಅಭಿವೃದ್ಧಿ ಸಾಧ್ಯ ವಿದ್ದಾಗ ಮಾತ್ರ ಮಾನಸಿಕ ಮತ್ತು ನೈತಿಕ ಶಿಕ್ಷಣದ ಜೊತೆ ದೈಹಿಕ ಶಿಕ್ಷಣವನ್ನೂ ತೆಗೆದುಕೊಳ್ಳಿ. ಆರೋಗ್ಯಕರ ಮನಸ್ಸು ಯಾವಾಗಲೂ ಆರೋಗ್ಯಕರ ದೇಹದಲ್ಲಿ ಪರ್ಯವಸಾನವಾಗುತ್ತದೆಂದು ನೆನಪಿಡಿ. ಇಂದು ನೀವು ಸಾಲ ಪಡೆಯಬಹುದು.

ಶಾದಿಪೂರ ಭೂಹಕ್ಕುಗಾಗಿ 105ನೇ ದಿನಕ್ಕೆ ಕಾಲಿಟ್ಟ ರೈತರ ಶಾಂತಿಯುತ ಹೋರಾಟ

• **ಉದಯವಾಹಿನಿ,ಚಿಂಚೋಳಿ**

ತಾಲ್ಲೂಕಿನ ಶಾಧಿಪೂರ ಗ್ರಾಮದ ಗಡಿಭಾಗದ ವ್ಯಾಪ್ತಿಯಲ್ಲಿ ಶಾಧಿಪೂರ ಗ್ರಾಮದ ಮತ್ತು ತಾಂಡಾಗಳ ರೈತರು ಭೂ ಹಕ್ಕುಗಳಿಗಾಗಿ 104ನೇ ದಿನದಿಂದ ಸತತವಾಗಿ ಶಾಂತಿಯುತವಾಗಿ ಹೋರಾಟ ಮಾಡುತ್ತಾ ಇಂದಿಗೆ 105ನೇ ದಿನಕ್ಕೆ ದಿನಕ್ಕೆ ಕಾಲಿಟ್ಟಿದೆ ಎಂದು ಕರವೇ ಸ್ವಾಭಿಮಾನ ಸೇನೆಯ ಅಧ್ಯಕ್ಷ ಲಿಂಬಾಜೀ ಚವ್ಹಾಣ ತಿಳಿಸಿದ್ದಾರೆ.

ತಾಲ್ಲೂಕಿನ ಶಾದಿಪುರ ಗ್ರಾಮದ ರೈತ ಕುಟುಂಬಗಳು ಕಳೆದ 105 ದಿನಗಳಿಂದ ತಮ್ಮ ಭೂಹಕ್ಕು ಹಾಗೂ ನ್ಯಾಯಕ್ಕಾಗಿ ಶಾಂತಿಯುತ ಪ್ರಜಾಪ್ರಭುತ್ವ ಹಾಗೂ ಕಾನೂನುಬದ್ಧ ಹೋರಾಟವನ್ನು ನಿರಂತರವಾಗಿ ನಡೆಯುತ್ತಿದೆ,ಇದು ಕೇವಲ ಒಂದು ಗ್ರಾಮದ ಸಮಸ್ಯೆಯಲ್ಲ,ಕರ್ನಾಟಕ ತೆಲಂಗಾಣ ಗಡಿ ಭಾಗದ ರೈತರ ಬದುಕು,ಭೂ ಹಕ್ಕು ಮತ್ತು ನ್ಯಾಯಕ್ಕೆ ಸಂಬಂಧಿಸಿದ ಗಂಭೀರ ವಿಷಯವಾಗಿದೆ .

ಈ ಅವಧಿಯಲ್ಲಿ ಜಿಲ್ಲಾಧಿಕಾರಿಗಳು,ಅಪಾರ ಜಿಲ್ಲಾಧಿಕಾರಿಗಳು,ಪ್ರಾದೇಶಿಕ ಆಯುಕ್ತರು ಗಣಿ ಮತ್ತು ಭೂವಿಜ್ಞಾನ ಇಲಾಖೆ ಸೇರಿದಂತೆ ಸಂಬಂಧಿಸಿದ ಹಲವು ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಸಲ್ಲಿಸಲಾಗಿದೆ ಆದರೆ ರೈತರ ಜಮೀನುಗಳ ಸರ್ವೇಕಾರ್ಯ ಇನ್ನೂ ಪೂರ್ಣಗೊಂಡಿಲ್ಲ ಇದರಿಂದ ರೈತ ಕುಟುಂಬಗಳು ಅನಿಶ್ಚಿತತೆ

ಉದಯವಾಹಿನಿ ಚಿತ್ರ

ಮತ್ತು ಆತಂಕದಲ್ಲಿ ಜೀವನ ಸಾಗಿಸುತ್ತಿವೆ,ಶಾದಿಪುರ ಗಡಿ ಪ್ರದೇಶದ ಸಮಸ್ಯೆ ಕರ್ನಾಟಕ ಹಾಗೂ ತೆಲಂಗಾಣ ರಾಜ್ಯಗಳಿಗೆ ಸಂಬಂಧಿಸಿದ್ದರಿಂದ ಕಲಬುರಗಿ ಜಿಲ್ಲಾಧಿಕಾರಿಗಳು ಹಾಗೂ ವಿಕಾರಾಬಾದ್ ಜಿಲ್ಲಾಧಿಕಾರಿಗಳು ಜಂಟಿಯಾಗಿ ಸಮನ್ವಯ ಸಭೆ ನಡೆಸಿ ಗಡಿ ವಿವಾದವನ್ನು ಶೀಘ್ರವಾಗಿ ಬಗೆಹರಿಸಿ ರೈತರ ಜಮೀನುಗಳ ಸರ್ವೇ ಕಾರ್ಯವನ್ನು ಪೂರ್ಣಗೊಳಿಸಿ ಕಾನೂನುಬದ್ಧ ಹಕ್ಕುಗಳನ್ನು ಒದಗಿಸಬೇಕು ಎಂದು ಸಮಾಜ ಸೇವಕ ಶಂಕರ ಪವ್ಹಾರ ಮತ್ತು ಲಿಂಬಾಜೀ ಚವ್ಹಾಣ ಒತ್ತಾಯಿಸಿದರು.

ಹೋರಾಟದ ವೇಳೆ ಸ್ಥಳದಲ್ಲಿ ಇಂತಹ ಅನೇಕ ಬೆದರಿಕೆಗಳು ಮತ್ತು ಹೋರಾಟ ಟೆಂಟಗೆ ಬೆಂಕಿ ಹಚ್ಚುವುದು ಅನೇಕ ತಡೆತಡೆಗಳು ಪ್ರಯತ್ನಗಳು ನಡೆದರೂ ರೈತರ ನ್ಯಾಯಕ್ಕಾಗಿ ನಡೆಯುತ್ತಿರುವ ಹೋರಾಟವನ್ನು ಹೆದರಿಸಿ ಭೇದರಿಸಿ ನಿಲ್ಲಿಸಲು ಸಾಧ್ಯವಿಲ್ಲ ನಾವು ಸಂವಿಧಾನ ಹಾಗೂ ಕಾನೂನಿನ ಚೌಕಟ್ಟಿನಲ್ಲಿಯೇ ಶಾಂತಿಯುತವಾಗಿ ಹೋರಾಟವನ್ನು ಮುಂದುವರಿಸುತ್ತಿದ್ದೇವೆ ಮಳೆ ಬಿಸಿಲು ಗಾಳಿ ಅಥವಾ ಯಾವುದೇ ಅಡೆತಡೆ ಬಂದರೂ ರೈತರ ನ್ಯಾಯಕ್ಕಾಗಿ ನಮ್ಮ ಸಂಕಲ್ಪ ಅಚಲವಾಗಿದೆ ನ್ಯಾಯ ದೊರೆಯುವವರೆಗೆ ಈ ಹೋರಾಟ ನಿರಂತರವಾಗಿ ಮುಂದುವರಿಯಲಿದೆ.

ಕಲಬುರ್ಗಿ ಜಿಲ್ಲಾಧಿಕಾರಿಗಳು ತೇಲಂಗಾಣ ಜಿಲ್ಲಾಧಿಕಾರಿಗಳು ಸಮನ್ವಯ ಸಭೆ ನಡೆಸಿ ರೈತರ ಜಮೀನುಗಳ ಸರ್ವೇ ಕಾರ್ಯವನ್ನು ತುರ್ತಾಗಿ ಪೂರ್ಣಗೊಳಿಸಿ ರೈತರಿಗೆ ಕಾನೂನುಬದ್ಧ ಹಕ್ಕು,ನ್ಯಾಯ ಹಾಗೂ ಶಾಶ್ವತ ಪರಿಹಾರ ಒದಗಿಸಬೇಕು ಗಡಿ ಭಾಗದ ರೈತರ ಸಮಸ್ಯೆಯನ್ನು ಸರ್ಕಾರ ಅತ್ಯಂತ ಆದ್ಯತೆಯಾಗಿ ಪರಿಗಣಿಸಿ ರೈತರ ಬದುಕಿಗೆ ದಾರಿದೀಪವಾಗಬೇಕು ಎಂದು ಶಂಕರ ಪವ್ಹಾರ,ಲಿಂಬಾಜೀ ಚವ್ಹಾಣ ಒತ್ತಾಯಿಸಿದರು.

ಶೀಘ್ರದಲ್ಲಿ ರಾಣೇಬೆನ್ನೂರ ಹೈಟೆಕ್ ರೈಲು ನಿಲ್ದಾಣ ಉದ್ಘಾಟನೆ

ಅಮೃತ ಭಾರತ ಸ್ಟೇಶನ್ ಸ್ಕಿಮ್ ಯೋಜನೆಯಡಿ ಆಯ್ಕೆಯಾಗಿದ್ದು, ಈ ಕಾರಣದಿಂದ ಹಳೆ ನಿಲ್ದಾಣದ ಚಿತ್ರಣ ಸಂಪೂರ್ಣ ಬದಲು ಮಾಡಲಾಗಿದೆ

• **ಉದಯವಾಹಿನಿ, ರಾಣೇಬೆನ್ನೂರ:**

ವಾಣಿಜ್ಯ ನಗರಿಯಾದ ರಾಣೇಬೆನ್ನೂರ ನಗರದ ರೈಲು ನಿಲ್ದಾಣದಲ್ಲಿ ಹಲವು ಬದಲಾವಣೆಯಾಗಿದ್ದು, ಸಾರ್ವಜನಿಕರಿಗೆ ಹತ್ತಾರು ಸೌಲಭ್ಯ ದೊರೆಯಲಿವೆ.ನಗರದ ರೈಲು ನಿಲ್ದಾಣವನ್ನು 23 ಕೋಟಿ ರೂ. ವೆಚ್ಚದಲ್ಲಿ ಅಮೃತ ಭಾರತ ಸ್ಟೇಶನ್ ಸ್কিಮ್

1 : 24 ಕೋಚ್ ನಿಲ್ಲುವಷ್ಟು ಅಭಿವೃದ್ಧಿ
2 : ಅಮೃತ ಭಾರತ ಸ್ಟೇಶನ್ ಸ್ಕಿಮ್
3 : ನಿಲ್ದಾಣದಲ್ಲಿ ಒಟ್ಟು 3 ಫ್ಲಾಟ್

ಯೋಜನೆಯಡಿ ಮೇಲ್ದರ್ಜೆಗೇರಿಸುವ ಕಾಮಗಾರಿ ಸೇರಿದಂತೆ ದೇಶದ 554 ರೈಲು ನಿಲ್ದಾಣಗಳ ಪುನರಾಭಿವೃದ್ಧಿಗೆ ಅಡಿಪಾಯ ಹಾಕುವ ಕಾರ್ಯಕ್ರಮಕ್ಕೆ ಕಳೆದ ಎರಡು ವರ್ಷಗಳ ಹಿಂದೆ ಪ್ರಧಾನಮಂತ್ರಿ ಮೋದಿ ಅವರು ಚಾಲನೆ ನೀಡಿದ್ದರು.

ಇದರಿಂದ ಹಲವಾರು ಅಭಿವೃದ್ಧಿ ಕಾಮಗಾರಿಗಳಾಗಿದ್ದು, ಶೀಘ್ರದಲ್ಲಿಯೇ ಸಾರ್ವಜನಿಕರಿಗೆ ಸೇವೆ ಸಿಗಲಿದೆ. ಜಿಲ್ಲೆಯಲ್ಲಿ ರಾಣೇಬೆನ್ನೂರ, ಹಾವೇರಿ ನಿಲ್ದಾಣ ದೊಡ್ಡದಾಗಿವೆ. ಇಲ್ಲಿನ ನಿಲ್ದಾಣದಲ್ಲಿ ದಿನವೊಂದಕ್ಕೆ ಸುಮಾರು 4 ಸಾವಿರ ಜನರು ಪ್ರಯಾಣಿಸುತ್ತಿದ್ದು, ಟಿಕೆಟ್‌ನಿಂದ 2 ಲಕ್ಷ ರೂ. ಆದಾಯವಾಗುತ್ತಿದೆ.

ಉದಯವಾಹಿನಿ ಚಿತ್ರ

ಮೈಸೂರು ವಿಭಾಗಕ್ಕೆ ಸೇರಿದ ಒಟ್ಟು 15 ರೈಲು ನಿಲ್ದಾಣದಲ್ಲಿ ಅಭಿವೃದ್ಧಿ ಕೆಲಸ ಮಾಡಲಾಗಿದೆ. ಈಗಾಗಲೇ ಭಂಟ್ವಾಳ ನಿಲ್ದಾಣ ಉದ್ಘಾಟನೆಯಾಗಿದೆ. ರಾಣೇಬೆನ್ನೂರ ರೈಲು ನಿಲ್ದಾಣದಲ್ಲಿ ಸಲ್ಪ ಕೆಲಸ ಬಾಕಿ ಉಳಿದುಕೊಂಡಿದೆ. ಅದನ್ನು ಪೂರ್ಣಗೊಳಿಸಲಾಗುವುದು. ಪ್ರಧಾನಿ ಕಚೇರಿಯಿಂದ ಅಧಿಕೃತ ಮಾಹಿತಿ ದೊರೆತ ನಂತರದಲ್ಲಿ ಉದ್ಘಾಟನೆ ಮಾಡಲಾಗುವುದು ಎಂದಿದ್ದಾರೆ. -ಗಿರೀಶ ಕಲಗೊಂಡ

ನಿಲ್ದಾಣದಲ್ಲಿ ಒಟ್ಟು 3 ಫ್ಲಾಟ್ ಫಾರಂಗಳಿವೆ. ಸುಮಾರು 240 ಮೀಟರ್ ಉದ್ದದ ನಿಲ್ದಾಣವನ್ನು 280ಮೀಟರ್ ಉದ್ದದ ವರೆಗೆ ಅಂದರೆ 24 ಕೋಚ್ ನಿಲ್ಲುವಷ್ಟು ಅಭಿವೃದ್ಧಿಪಡಿಸಲಾಗಿದೆ. ನಿಲ್ದಾಣದ ಈಗಿನ ಕಟ್ಟಡದ ಮೇಲ್ಭಾಗದಲ್ಲಿ ಇನ್ನೊಂದು ಕಟ್ಟಡ ನಿರ್ಮಾಣ ಮಾಡಲಾಗಿದೆ. ಸಾರ್ವಜನಿಕರಿಗೆ ಕುಳಿತುಕೊಳ್ಳಲು ಆಸನಗಳ ಸಂಖ್ಯೆ ಹೆಚ್ಚಿಸಲಾಗಿದೆ. ಕುಡಿಯುವ ನೀರು ಪೂರೈಕೆ, ಶೌಚಾಲಯ ಸೇರಿದಂತೆ ಇತರ ಸೌಲಭ್ಯ ನೀಡಲಾಗಿದೆ.

ನಿಲ್ದಾಣದ ಒಂದು ಭಾಗದಲ್ಲಿ ಸಾರ್ವಜನಿಕರು ಒಂದು ಫ್ಲಾಟ್ ಪಾರಂನಿಂದ ಇನ್ನೊಂದು ಫ್ಲಾಟ್ ಪಾರಂಗೆ ಹೋಗಲು ಎಕ್ಸಲೇಟರ್ ಮಾಡಿದರೆ, ಇನ್ನೊಂದು ಭಾಗದಲ್ಲಿ ಲಿಫ್ಟ್ ಮೆಟ್ಟಿಲು ವ್ಯವಸ್ಥೆ ಮಾಡಲಾಗಿದೆ. ಫ್ಲಾಟ್ ಪಾರಂಗಳನ್ನು ಅಭಿವೃದ್ಧಿಪಡಿಸಲಾಗಿದೆ. ಸುತ್ತಲೂ ಕಾಂಕ್ರೀಟ್ ಮಾಡಲಾಗುತ್ತಿದೆ. ನಿಲ್ದಾಣದ ಕಟ್ಟಡ ಮುಂಭಾಗವನ್ನು ಸುಂದರವಾಗಿ ನಿರ್ಮಿಸಲಾಗಿದೆ.

ನಿಲ್ದಾಣ ಎದುರು ಪಾರ್ಕಿಂಗ್ ಸ್ಥಳ ನಿರ್ಮಾಣವಾಗಿದ್ದು, ಬೈಕ್, ಕಾರು ಹಾಗೂ ಆಟೋಗಳಿಗೆ ಪ್ರತ್ಯೇಕ ಆವರಣ ನಿರ್ಮಿಸಲಾಗಿದೆ. ಅಲ್ಲಿಯೂ ಶೆಲ್ಟರ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ಗಾರ್ಡನ್ ನಿರ್ಮಾಣ, ದೊಡ್ಡದಾದ ಎಲ್‌ಇಡಿ ಮೂಲಕ ಟ್ರೈನ್ ಇಂಡಿಕೇಷನ್ ಬೋರ್ಡ್, ಫ್ಲಾಟ್ ಪಾರಂನಲ್ಲಿ ರೈಲು ನಿಲ್ಲುವ ಸ್ಥಳದ ಬೋರ್ಡ್ ಸೇರಿದಂತೆ ಅನೇಕ ಸೌಲಭ್ಯ ಕಲ್ಪಿಸುವ ಕೆಲಸವಾಗಿದೆ. ಒಟ್ಟಾರೆ ಈ ನಿಲ್ದಾಣ ಅಭಿವೃದ್ಧಿಯಾಗಿದ್ದು, ಸಾರ್ವಜನಿಕರ ಪ್ರಯಾಣಕ್ಕೆ ಸಾಕಷ್ಟು ಅನುಕೂಲವಾಗಿದೆ.

ನಗರದ ರೈಲು ನಿಲ್ದಾಣವನ್ನು 23 ಕೋಟಿ ರೂ. ವೆಚ್ಚದಲ್ಲಿ ಅಮೃತ ಭಾರತ ಸ್ಟೇಶನ್ ಸ್ಕಿಮ್ ಯೋಜನೆಯಡಿ ಮೇಲ್ದರ್ಜೆಗೇರಿಸುವ ಕಾಮಗಾರಿ ಜಿಲ್ಲೆಯಲ್ಲಿ ರಾಣೇಬೆನ್ನೂರ, ಹಾವೇರಿ ನಿಲ್ದಾಣ ದೊಡ್ಡದಾಗಿವೆ. ಇಲ್ಲಿನ ನಿಲ್ದಾಣದಲ್ಲಿ ದಿನವೊಂದಕ್ಕೆ ಸುಮಾರು 4 ಸಾವಿರ ಜನರು ಪ್ರಯಾಣಿಸುತ್ತಿದ್ದು, ಟಿಕೆಟ್‌ನಿಂದ 2 ಲಕ್ಷ ರೂ. ಆದಾಯವಾಗುತ್ತಿದೆ.

ಸಿದ್ದರಾಮಯ್ಯ ಕಲುಷಿತವಾಗಲು ಅವರ ಮಗ, ಭೈರತಿ ಸುರೇಶ್ ಕಾರಣ

• **ಉದಯವಾಹಿನಿ, ವಿಜಯಪುರ:**

ಸಿದ್ದರಾಮಯ್ಯ ಪಾಪ ಬಹಳ ಅತ್ಯಂತ ಸ್ವಚ್ಛ ರಾಜಕಾರಣಿ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ. ವಿಜಯಪುರದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಮೊದಲು ಮುಖ್ಯಮಂತ್ರಿಯಾಗಿದ್ದಾಗ ಒಳ್ಳೆಯವರಾಗಿದ್ದರು. ಆದರೆ ಈಗ ಕಲುಷಿತರಾಗಿದ್ದಾರೆ, ಅವರ ಮಗ ಮಾಡಿದ ಕರ್ಮಕಾಂಡದಿಂದ ಅವರು ಕಲುಷಿತರಾಗಿದ್ದಾರೆ ಎಂದರು.

ಸಿದ್ದರಾಮಯ್ಯ ಕಲುಷಿತಗೊಳ್ಳಲು ಅವರ ಮಗ ಮತ್ತು ಭೈರತಿ ಸುರೇಶ್ ಕಾರಣ ಎಂದು ಯತ್ನಾಳ್ ಆರೋಪಿಸಿದ್ದಾರೆ. ಜಾತಿ ವ್ಯವಸ್ಥೆ, ಬಾಯಿತೆರೆದ್ರೆ ಅಲ್ಪ ಸಂಖ್ಯಾತರಿಗೆ ಅಷ್ಟು ಕೋಟಿ, ಇಷ್ಟು ಕೋಟಿ ಎಂದು ಹೇಳ್ತಾರೆ, ಅವರಿಗೆ ದಲಿತರ ಬಗ್ಗೆ ಸ್ವಲ್ಪವೂ ಕಾಳಜಿಯಿಲ್ಲ, ತಮ್ಮ ಸಮುದಾಯಕ್ಕೆ ಅವರು ಹೆಚ್ಚಿನದಾಗಿ ಏನು ಮಾಡಿಲ್ಲ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಸಂಪೂರ್ಣವಾಗಿ ಸಕ್ರಿಯ ರಾಜಕೀಯದಿಂದ ನಿವೃತ್ತಿ ಪಡೆಯಬೇಕು. ಕಾಂಗ್ರೇಸ್ ಮಣ್ಣಾಗಬೇಕು ಎಂದರು. ಸಿಎಂ ಡಿಕೆ ಶಿವಕುಮಾರ್ ಪ್ರಧಾನಿ ನರೇಂದ್ರ ಮೋದಿ ಮನೆ ಮುಂದೆ ಹೋಗಿ ಪ್ರತಿಭಟನೆ ಮಾಡುತ್ತಿದ್ದಾರೆ, ರಾಜ್ಯದಲ್ಲಿ 4. 80 ಲಕ್ಷ ಹುದ್ದೆಗಳು ಖಾಲಿಯಿವೆ, ಕೆಪಿಎಸ್ ಸಿ ಹಗರಣ ಸಂಬಂಧ ಮೊದಲು ಡಿ.ಕೆ ಶಿವಕುಮಾರ್ ರಾಜಿನಾಮೆ ನೀಡಬೇಕು. ಕೆಪಿಎಸ್ ಸಿ ಯನ್ನು ಮೊದಲು ವಿಸರ್ಜನೆ ಮಾಡಬೇಕು ಎಂದು ಯತ್ನಾಳ್ ಆಗ್ರಹಿಸಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ನರಸತ್ತಿದೆ. ಪಕ್ಷಕ್ಕೆ ಧಮ್ ಇಲ್ಲ, ಇದರಿಂದ ಕಾಂಗ್ರೇಸ್ ನವರಿಗೆ ವಿರೋಧ ಪಕ್ಷಗಳ ಬಗ್ಗೆ ಯಾವುದೇ ಭಯವಿಲ್ಲ. ವಿಜಯೇಂದ್ರನ ಕ್ಯಾಂಡಿಡೇಟ್ ಒಬ್ಬ 2 ಕೋಟಿ ಹಣ ಕೊಟ್ಟು ಕೆಪಿಎಸ್ ಸಿ ನಲ್ಲಿ ಕೆಲಸ ತೆಗೆದುಕೊಂಡಿರುವುದು ಬಹಿರಂಗ ಸತ್ಯವಾಗಿದೆ.

ಪ್ರತಾಪ್ ಸಿಂಹನನ್ನು ಮೂಲೆಗುಂಪು ಮಾಡಿದ್ದಾರೆ. ಯಾವ ಕಾರಣಕ್ಕೆ ಟಿಕೆಟ್ ಕೊಟ್ಟಿಲ್ಲ ಎಂಬುದನ್ನು ಇದುವರೆಗೆ ತಿಳಿಸಿಲ್ಲ ಎಂದರು. ಪಕ್ಷಕ್ಕೆ ದುಡಿದವರಿಗಲ್ಲ ರಾತ್ರಿ ಯಾರು ಸೂಟ್ ಕೇಸ್ ತಗೊಂಡು ಹೋಗಿ ಕೊಡ್ತಾರೋ ಅವರಿಗೆ ಟಿಕೆಟ್ ಇಲ್ಲ ಎಂದರು
-ಬಿಜೆಪಿ ಶಾಸಕ ಬಸನಗೌಡ ಪಾಟೀಲ್

ಫೆರ್ರಿ ಯೋಜನೆಗೆ ಅನುದಾನ ನಿರಾಕರಿಸಿದ ಕೇಂದ್ರ ಸರ್ಕಾರ

• **ಉದಯವಾಹಿನಿ, ಮಂಗಳೂರು:**

ಕರಾವಳಿ ಪ್ರವಾಸೋದ್ಯಮಕ್ಕೆ ದೊಡ್ಡ ಉತ್ತೇಜನ ನೀಡಬಲ್ಲ ಮಂಗಳೂರು